ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮೇ 11, 2021

ಸಂಪುಟ : 47 ಸಂಚಿಕೆ : 358 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




ಲಾಕ್‌ಡೌನ್ ಇದ್ದರೂ ದಾವಣಗೆರೆ ರಸ್ತೆಯಲ್ಲಿ ಓಡಾಡುತ್ತಿದ್ದ ವಾಹನಗಳನ್ನು ಪೊಲೀಸರು ಪರಿಶೀಲಿಸುತ್ತಿರುವುದು.



ವಾಹನ ನಿರ್ಬಂಧಿಸಲು ಕಬ್ಬಿಣದ ಗೇಟ್ ಅಳವಡಿಸುತ್ತಿರುವುದು.



ಪರ ಊರಿನಿಂದ ಬಂದವರು ಕಾಲ್ನಡಿಗೆಯಲ್ಲಿ ತೆರಳುತ್ತಿರುವುದು



ಪೊಲೀಸ್ ವಶದಲ್ಲಿರುವ ಬೈಕ್‌ಗಳು

# ಅನಗತ್ಯ ಓಡಾಟಕ್ಕೆ ಬ್ರೇಕ್

## ಅನಾವಶ್ಯಕವಾಗಿ ರಸ್ತೆಗಿಳಿಯುವವರ ಮೇಲೆ ಹದ್ದಿನ ಕಣ್ಣು

ದಾವಣಗೆರೆ, ಮೇ 10- ಕೊರೊನಾ ಪ್ರಕರಣಗಳು ಹೆಚ್ಚಾದ ಕಾರಣ ರಾಜ್ಯ ಸರ್ಕಾರ ಸೋಮವಾರದಿಂದ ಕಠಿಣ ಲಾಕ್‌ಡೌನ್ ಜಾರಿಗೊಳಿಸಿದ್ದು, ಹಳೆಯ ಮೆಡಿಕಲ್ ರಸೀದಿ ಹಿಡ್ಕೊಂಡು, ಕುಂಟು ನೆಪ ಹೇಳ್ಕೊಂಡು ಅನಗತ್ಯವಾಗಿ ರಸ್ತೆಗೆ ಇಳಿದರೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆಯಡಿಯಲ್ಲಿ ಬಂಧಿಸಿ, ಜಾಮೀನು ರಹಿತ ಬಂಧನದ ಪ್ರಕರಣ ದಾಖಲಿಸಿ ಜೈಲಿಗೆ ಹಾಕಲಾಗುತ್ತದೆ.

ರಾಜ್ಯ ಸರ್ಕಾರ 14 ದಿನ ಲಾಕ್ ಡೌನ್ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಇಂದು ದಾವಣಗೆರೆ ತಹಶೀಲ್ದಾರ್ ನೇತೃತ್ವದಲ್ಲಿ ಕಂದಾಯ ಇಲಾಖೆ, ನಗರ ಪಾಲಿಕೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸೇರಿ ಎಲ್ಲರೂ ನಗರದ ಜಯದೇವ ವೃತ್ತದಲ್ಲಿ ಬೆಳಗಿನಿಂದ ಕಾರ್ಯಾಚರಣೆ ನಡೆಸಿ ವಾಹನಗಳ ತಪಾಸಣೆ ನಡೆಸಿ, ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳನ್ನು ಜಪ್ತಿ ಮಾಡಲಾಯಿತು. ಅನಗತ್ಯವಾಗಿ ಸಂಚರಿಸುವವರ ಮೇಲೆ ದಂಡ ವಿಧಿಸಿದರು. ಕೆಲವರಿಗೆ ಎಚ್ಚರಿಕೆ ನೀಡಿ ಕಳುಹಿಸಿದರು.

**ಅನಾವಶ್ಯಕವಾಗಿ ರಸ್ತೆಗಿಳಿದ 259 ವಾಹನಗಳನ್ನು ವಶಕ್ಕೆ**

**ಅನಾವಶ್ಯಕವಾಗಿ ರಸ್ತೆಗಿಳಿಯದಂತೆ ಕೈಮುಗಿದು ಕೋರಿಕೊಂಡ ಪೊಲೀಸರು**

ಅಗತ್ಯ ಸೇವೆಗಳ ಹೆಸರಲ್ಲಿ ಜನರು ಅನಗತ್ಯವಾಗಿ ರಸ್ತೆಗೆ ಬರುತ್ತಿದ್ದಾರೆ. ಈ ಹಿಂದೆ ನೀಡಲಾಗಿದ್ದ ಪಾಸುಗಳನ್ನೇ ಹಿಡಿದು ಅಡ್ಡಾಡುತ್ತಿದ್ದಾರೆ. ಇಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ನಿಯಮ ಉಲ್ಲಂಘಿಸಿದರೆ 5ರಿಂದ 10 ವರ್ಷಗಳ ಕಾಲ (3ನೇ ಪುಟಕ್ಕೆ)

### ಅಂಗಡಿ-ಮುಂಗಟ್ಟುಗಳು ಬಂದ್-ತಪ್ಪದ ವಾಹನಗಳ ಓಡಾಟ

ದಾವಣಗೆರೆ, ಮೇ 10- ಸರ್ಕಾರ ಲಾಕ್‌ಡೌನ್ ಘೋಷಿಸಿರುವ ಕಾರಣ ನಗರದಲ್ಲಿ ಇಂದು ಅಂಗಡಿ-ಮುಂಗಟ್ಟುಗಳು ಸಂಪೂರ್ಣ ಬಂದ್ ಆಗಿದ್ದವು. ಬಹುತೇಕ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಆದರೆ ವಾಹನಗಳ ಓಡಾಟ ಮಾತ್ರ ಸ್ವಲ್ಪ ಮಟ್ಟಿಗೆ ಕಂಡು ಬಂತು.

ಮೆಡಿಕಲ್ ಶಾಪ್, ಪೆಟ್ರೋಲ್ ಬಂಕ್, ಅಗತ್ಯ ವಸ್ತುಗಳ ಸೇವೆ ಹೊರತುಪಡಿಸಿ ಉಳಿದೆಲ್ಲಾ ಅಂಗಡಿ-ಮುಂಗಟ್ಟುಗಳು ಬಂದ್ ಆಗಿದ್ದವು.

ಅನಾವಶ್ಯಕವಾಗಿ ರಸ್ತೆಗಿಳಿದು ಆಸ್ಪತ್ರೆ ಹಳೇ ಚೀಟಿಗಳು, ಮೆಡಿಕಲ್ ಸ್ಲಿಪ್ ಇಟ್ಟುಕೊಂಡು, ಲಸಿಕೆ ಹಾಕಿಸುವುದಾಗಿ, ವಿಮಾ ಪಾಲಿಸಿ ಕಟ್ಟುವುದಾಗಿ, ತರಕಾರಿ, ದಿನಸಿ ತರುವುದಾಗಿ ಹೀಗೆ ಕುಂಟು ನೆಪ ಹೇಳಿ ಕಣ್ತಪ್ಪಿಸಿ ಓಡಾಟ ನಡೆಸಲು ಮುಂದಾದ ವಾಹನ ಸವಾರರಿಗೆ ವಾಹನ ಜಪ್ತಿ, ದಂಡದ ಬಿಸಿ ತಟ್ಟಿದೆ.

ನಗರದಲ್ಲಿರುವ ಮುಖ್ಯರಸ್ತೆಗೆ ವಾಹನ ಸಂಚಾರ ಮಾಡದಂತೆ ನಾಕಾಬಂಧಿಯನ್ನು ರಾತ್ರಿಯೇ ಮಾಡಲಾಗಿದೆ. ಕೇವಲ ಏಕ ಮುಖ ರಸ್ತೆಗಳಲ್ಲಿ ತುರ್ತು ಸಂದರ್ಭ ಮತ್ತು ಅವಶ್ಯಕ (3ನೇ ಪುಟಕ್ಕೆ)

# ಸೋಂಕಿನಲ್ಲಿ ರಾಜ್ಯ ಪ್ರಥಮ

## ಪ್ರತಿದಿನದ ಸೋಂಕಿನಲ್ಲಿ ಮಹಾರಾಷ್ಟ್ರ ಹಿಂದೆ ಹಾಕಿದ ಕರ್ನಾಟಕ

ಬೆಂಗಳೂರು, ಮೇ 10 – ರಾಜ್ಯದಲ್ಲಿ ಸೋಮವಾರ ಇಡೀ ದೇಶದಲ್ಲೇ ಅತಿ ಹೆಚ್ಚಿನ ಕೊರೊನಾ ಸೋಂಕು ಪ್ರಕರಣಗಳು ಕಾಣಿಸಿಕೊಂಡಿದ್ದು, ಸಾವುಗಳಲ್ಲೂ ರಾಜ್ಯ ಮೊದಲ ಸ್ಥಾನದಲ್ಲಿದೆ. ರಾಜ್ಯದಲ್ಲಿ 39,305 ಸೋಂಕುಗಳು ಕಾಣಿಸಿಕೊಂಡಿದ್ದು, 596 ಜನ ಸಾವನ್ನಪ್ಪಿದ್ದಾರೆ.

ಇದೇ ದಿನ ಮಹಾರಾಷ್ಟ್ರದಲ್ಲಿ 37,236 ಸೋಂಕಿತರು ಕಂಡು ಬಂದಿದ್ದಾರೆ. ರಾಜ್ಯದಲ್ಲಿ 549 ಜನ ಸಾವನ್ನಪ್ಪಿದ್ದಾರೆ.

ಕೇರಳದಲ್ಲಿ 27,487 ಸೋಂಕಿತರು ಕಂಡು ಬಂದಿದ್ದು, ಇಲ್ಲಿ 65 ಸಾವುಗಳು ಸಂಭವಿಸಿವೆ. ಉತ್ತರ ಪ್ರದೇಶದಲ್ಲಿ 21,277 ಸೋಂಕಿತರು ಕಂಡು ಬಂದಿದ್ದು, 278 ಜನ ಸಾವನ್ನಪ್ಪಿದ್ದಾರೆ.

ಕರ್ನಾಟಕದಲ್ಲಿ ನಿನ್ನೆ 47,930 ಸೋಂಕಿತರು ಕಂಡು ಬಂದಿದ್ದರು. ಭಾನುವಾರಕ್ಕೆ ಹೋಲಿಸಿದರೆ ಸೋಂಕಿತರ ಸಂಖ್ಯೆ ಕಡಿಮೆಯಾಗಿದ್ದರೂ, ಇಡೀ ದೇಶಕ್ಕೆ ಹೋಲಿಸಿದಾಗ ರಾಜ್ಯ ಮೊದಲ ಸ್ಥಾನಕ್ಕೆ ಬಂದಿದೆ. ಕಳೆದ ಹಲವಾರು ವಾರಗಳಿಂದ ಮಹಾರಾಷ್ಟ್ರವೇ ಸೋಂಕಿನಲ್ಲಿ ಮೊದಲ ಸ್ಥಾನದಲ್ಲಿತ್ತು. ಕಳೆದ ಎರಡು ವಾರಗಳಲ್ಲಿ ಮಹಾರಾಷ್ಟ್ರದಲ್ಲಿ ಸೋಂಕಿತರ ಸಂಖ್ಯೆ ಕಡಿಮೆಯಾಗುತ್ತಿದ್ದರೆ, ಚೇತರಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ.

ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆಯೂ ನಿರಂತರವಾಗಿ ಏರುತ್ತಿದೆ. ಮತ್ತೊಂದೆಡೆ ಮಹಾರಾಷ್ಟ್ರದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ನಿರಂತರವಾಗಿ ಇಳಿಯುತ್ತಿದೆ. ಏಪ್ರಿಲ್ 5ರ ನಂತರ ಮಹಾರಾಷ್ಟ್ರದಲ್ಲಿ ಇಷ್ಟು ಕಡಿಮೆ ಸೋಂಕಿತರು ಕಂಡು ಬಂದಿರುವುದು ಇದೇ ಮೊದಲು. ಮುಂಬೈನಲ್ಲಿ 1,782 ಸೋಂಕಿತರು ಕಂಡು ಬಂದಿದ್ದಾರೆ.

ಕರ್ನಾಟಕದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 5.71 ಲಕ್ಷವಾಗಿದೆ. ಮಹಾರಾಷ್ಟ್ರದಲ್ಲೀಗ ಸಕ್ರಿಯ ಸೋಂಕಿತರ ಸಂಕ್ಯೆ 5.90 ಲಕ್ಷವಾಗಿದೆ. ಬೆಂಗಳೂರು ನಗರ ಒಂದರಲ್ಲೇ 3.52 ಲಕ್ಷ ಸೋಂಕಿತರಿದ್ದಾರೆ. ಇಡೀ ದೇಶದಲ್ಲೇ ಬೆಂಗಳೂರು ಅತಿ ಹೆಚ್ಚು ಸಕ್ರಿಯ ಸೋಂಕಿತರನ್ನು ಹೊಂದಿದೆ. ಎರಡನೇ ಸ್ಥಾನದಲ್ಲಿರುವ ಮಹಾರಾಷ್ಟ್ರದ ಪುಣೆಯಲ್ಲಿ 97,593 (3ನೇ ಪುಟಕ್ಕೆ)

# ಭಾರತದಲ್ಲಿನ ರೂಪಾಂತರಿ ಕೊರೊನಾ 'ಕಳವಳಕಾರಿ' : ಡಬ್ಲ್ಯೂಹೆಚ್‌ಒ

ಜಿನೇವಾ, ಮೇ 10 – ಭಾರತದಲ್ಲಿ ಕಂಡು ಬರುತ್ತಿರುವ ರೂಪಾಂತರಿ ಕೊರೊನಾ ಬಿ.1.671 ವೇಗವಾಗಿ ಹರಡುತ್ತಿದ್ದು, ಇದು ಕಳವಳಕಾರಿ ವರ್ಗಕ್ಕೆ ಸೇರಿದ್ದು ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಈ ರೂಪಾಂತರಿ ಭಾರತದಲ್ಲಿ ಕಂಡು ಬಂದಿತ್ತು. ಇದು ಮೂಲ ವೈರಸ್‌ಗಿಂತ ಹೆಚ್ಚು ವೇಗವಾಗಿ ಹರಡುತ್ತದೆ ಹಾಗೂ ಲಸಿಕೆಯಿಂದ ದೊರೆಯುವ ರಕ್ಷಣೆಗೆ ವಿರೋಧ ಹೆಚ್ಚಿಸುತ್ತದೆ ಎಂದು ವಿಶ್ವ ಆರೋಗ್ಯ ಸಂಘಟನೆಯ ಕೊವಿಡ್ ಪರಿಣಿತೆ ಮಾರಿಯಾ ವ್ಯಾನ್ ಕರ್ಕೋವೆ ಹೇಳಿದ್ದಾರೆ.

ಈ ಕೊರೊನಾ ರೂಪಾಂತರಿ ಜಾಗತಿಕ ಮಟ್ಟದಲ್ಲಿ ಕಳವಳ ತರುವ ವರ್ಗಕ್ಕೆ ಸೇರಿದ್ದಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಮಂಗಳವಾರ ಪ್ರಕಟಿಸುವುದಾಗಿ ತಿಳಿಸಿದ್ದಾರೆ.

ಭಾರತ ವಿಶ್ವದಲ್ಲೇ ಅತ್ಯಂತ ತೀವ್ರ ಸ್ವರೂಪದ ಕೊರೊನಾ ಸೋಂಕು ಎದುರಿಸುತ್ತಿದೆ. ಪ್ರತಿನಿತ್ಯ 4 ಲಕ್ಷದಷ್ಟು ಕೊರೊನಾ ಸೋಂಕಿತರು ಕಂಡು ಬರುತ್ತಿದ್ದಾರೆ. ವಿಶ್ವದ ಬಹುತೇಕ ಅರ್ಧದಷ್ಟು ಸೋಂಕುಗಳು ಈಗ ಭಾರತದಲ್ಲಿ ಪತ್ತೆಯಾಗುತ್ತಿವೆ.


ಬಿ.1.167 ಸೋಂಕು ಆತಂಕ ತರುವ ವೇಗದಲ್ಲಿ ಹರುಡುತ್ತಿದೆ ಎಂಬ ಕಳವಳ ಕೇಳಿ ಬಂದಿತ್ತು. ಆದರೆ, ವಿಶ್ವ ಆರೋಗ್ಯ ಸಂಘಟನೆ ಇದುವರೆಗೂ ಭಾರತದ ರೂಪಾಂತರಿಯನ್ನು 'ಆಸಕ್ತಿ ವಹಿಸಬೇಕಾದ ರೂಪಾಂತರಿ' ಎಂದೇ ಪರಿಗಣಿಸಿತ್ತು. ಈ ಹಿಂದೆ ಬ್ರಿಟನ್, ಬ್ರೆಜಿಲ್ ಹಾಗೂ ದಕ್ಷಿಣ ಆಫ್ರಿಕಾ ರೂಪಾಂತರಿಗಳನ್ನು ಕಳವಳ ತರುವ ಕೊರೊನಾ ಎಂದು ಪರಿಗಣಿಸಲಾಗಿತ್ತು.

# ಸುವರ್ಣ ಪೋರ್ಟಲ್‌ನಲ್ಲಿ ಆಕ್ಸಿಜನ್, ರೆಮ್ಡಿಸಿವಿರ್ ಮಾಹಿತಿ

ಬೆಂಗಳೂರು, ಮೇ 10 - ಆಕ್ಸಿಜನ್, ರೆಮ್ಡಿಸಿವಿರ್ ಜತೆಗೆ ಖಾಸಗಿ ಆಸ್ಪತ್ರೆಗಳಲ್ಲಿರುವ ಸರ್ಕಾರಿ ಬೆಡ್‌ಗಳ ಮಾಹಿತಿಯನ್ನು ಸುವರ್ಣ ಆರೋಗ್ಯ ಸುರಕ್ಷತಾ ಟ್ರಸ್ಟ್ ಪೋರ್ಟಲ್‌ನಲ್ಲಿ ನೀಡಲಾಗುವುದು ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ ಉಪ ಮುಖ್ಯಮಂತ್ರಿ ಡಾ.ಸಿ. ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಮಾಧ್ಯಮಗಳ ಜತೆ ಮಾತನಾಡಿದ ಅವರು, ಆಮ್ಲಜನಕ ಮತ್ತು ರೆಮ್ಡಿಸಿವಿರ್ ಬೇಡಿಕೆ - ಪೂರೈಕೆಯಲ್ಲಿ ಪಾರದರ್ಶಕತೆ ಬಹಳ ಮುಖ್ಯ. ಎಷ್ಟು ಪೂರೈಕೆ ಆಗುತ್ತಿದೆ? ಎಷ್ಟು ಬಳಕೆಯಾಗುತ್ತಿದೆ? ಯಾರಿಗೆ ಕೊಡಲಾಗಿದೆ? ಎಂಬ ಸಮಗ್ರ ಮಾಹಿತಿಯನ್ನು ಇದೇ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಈಗ ಪ್ರತಿದಿನ 35,000 ರೆಮ್ಡಿಸಿವಿರ್ ಡೋಸ್ ಬೇಕಿದೆ ಎಂದರು. (3ನೇ ಪುಟಕ್ಕೆ)

# ಜಿಲ್ಲೆಗೆ 20 ಕೆ.ಎಲ್. ಆಕ್ಸಿಜನ್ ಪೂರೈಕೆಗೆ ಸಿದ್ದೇಶ್ವರ ಒತ್ತಾಯ



ದಾವಣಗೆರೆ, ಮೇ 10 – ದಾವಣಗೆರೆ ಜಿಲ್ಲೆಗೆ ಹೆಚ್ಚಿನ ಆಕ್ಸಿಜನ್ ಪೂರೈಕೆ ಮಾಡುವಂತೆ ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಅವರಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರ ಜಿಲ್ಲಾವಾರು ಆಕ್ಸಿಜನ್ ವಿತರಣೆಗೆ (3ನೇ ಪುಟಕ್ಕೆ)

# ಕಾನೂನು ಕ್ರಮ ತೆಗೆದುಕೊಳ್ಳಿ, ಬಲಪ್ರಯೋಗ ಬೇಡ



ಬೆಂಗಳೂರು, ಮೇ 10 – ಕೊರೊನಾ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳಬೇಕೇ ವಿನಃ ಬಲ ಪ್ರಯೋಗ ಮಾಡಬಾರದು ಎಂದು ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್ ಸೂಚನೆ ನೀಡಿದ್ದಾರೆ.

ಜನಸಾಮಾನ್ಯರ ಮೇಲೆ ಪೊಲೀಸರು ಲಾಠಿ ಬೀಸಿದ ಹಲವಾರು ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾ ರವಾದ ನಂತರ ಅವರು ಟ್ವೀಟ್ ಮೂಲಕ ಈ ಸೂಚನೆ ನೀಡಿದ್ದಾರೆ.

ವಾಹನ ಸವಾರರು ಗಳ ಮೇಲೆ ಲಾಠಿ ಬೀಸಿರುವುದು ಆಕ್ಷೇಪಕ್ಕೆ ಕಾರಣವಾಗಿತ್ತು. ಲಾಕ್‌ಡೌನ್ ಎಂದರೆ ಜನರನ್ನು ಬಡಿಯುವುದಾ? ಎಂದು ಹಲವರು ಪ್ರಶ್ನಿಸಿದ್ದರು. ಆಸ್ಪತ್ರೆಗೆ ತೆರಳುವ ರೋಗಿಗಳು, ತುರ್ತು ಕಾರ್ಯಗಳ ಮೇಲೆ ತೆರಳುವವರ ಮೇಲೂ ಲಾಠಿ ಪ್ರಹಾರ ನಡೆಸಲಾಗಿದೆ ಎಂಬ ಆರೋಪ ಕೇಳಿ ಬಂದಿದ್ದವು.

# ಯಡಿಯೂರಪ್ಪಗೆ ವರಿಷ್ಠರಿಂದ ಬುಲಾವ್

## ನಾಯಕತ್ವ ಬದಲಾವಣೆ ಚರ್ಚೆಯ ನಡುವೆಯೇ ಈ ಬೆಳವಣಿಗೆ

ಬೆಂಗಳೂರು, ಮೇ 10 - ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರಿಗೆ ದೆಹಲಿಗೆ ಬರುವಂತೆ ಪಕ್ಷದ ವರಿಷ್ಠರು ಸಂದೇಶ ರವಾನೆ ಮಾಡಿದ್ದಾರೆ. ಬುಧವಾರವೇ ದೆಹಲಿಗೆ ಬಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರನ್ನು ಭೇಟಿ ಮಾಡುವಂತೆ ಪಕ್ಷದ ಕಚೇರಿಯಿಂದ ಸಂದೇಶ ಬಂದಿದೆ.

ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ಮತ್ತು ಬಿಜೆಪಿಯ ಆಂತರಿಕ ವಲಯದಲ್ಲಿ ಗುಸು ಗುಸು ನಡೆಯುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿಯವರಿಗೆ ಬುಲಾವ್ ಬಂದಿದೆ.

ಕಳೆದ ವಾರವೇ ದೆಹಲಿಗೆ ಬರುವಂತೆ ವರಿಷ್ಠರು ಸಲಹೆ ಮಾಡಿದ್ದರು. ರಾಜ್ಯದಲ್ಲಿ ಕೊರೊನಾದ ಸೋಂಕಿನ ಅಬ್ಬರದ ಹಿನ್ನೆಲೆಯಲ್ಲಿ ತಾವು ದೆಹಲಿಗೆ ಬರಲಾಗದು ಎಂದು ತಮ್ಮ ಬದಲು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಹಾಗು ಪುತ್ರ ವಿಜಯೇಂದ್ರ ಅವರನ್ನು ದೆಹಲಿಗೆ ಕಳುಹಿಸಿಕೊಟ್ಟಿದ್ದರು.



ಬೊಮ್ಮಾಯಿ ಹಾಗೂ ವಿಜಯೇಂದ್ರ ಎರಡು ದಿನಗಳ ಕಾಲ ದೆಹಲಿಯಲ್ಲಿ ಬಿಡಾರ ಹೂಡಿ, ಕೇಂದ್ರ ಗೃಹ ಸಚಿವರು ಹಾಗೂ ಪಕ್ಷದ ಇತರೆ ನಾಯಕರನ್ನು ಭೇಟಿಯಾಗಿ ಮಾತುಕತೆ ನಡೆಸಿ, ನಗರಕ್ಕೆ ಹಿಂತಿರುಗಿದ್ದರು.

ರಾಜ್ಯ ಗೃಹ ಸಚಿವರು ನಗರಕ್ಕೆ ಹಿಂತಿರುಗುತ್ತಿದ್ದಂತೆ, ಮುಖ್ಯಮಂತ್ರಿಯವರಿಗೆ ವರಿಷ್ಠರಿಂದ ಬುಲಾವ್ ಬಂದಿದೆ. ವರಿಷ್ಠರ ಕರೆಗೆ ಮುಖ್ಯಮಂತ್ರಿಯವರು ಸ್ಪಂದಿಸುತ್ತಾರೋ ಇಲ್ಲವೇ (3ನೇ ಪುಟಕ್ಕೆ)

# ರಾಜ್ಯದಲ್ಲಿ 39,305 ಸೋಂಕಿತರು

ಬೆಂಗಳೂರು, ಮೇ 10 – ರಾಜ್ಯದಲ್ಲಿ ಸೋಮವಾರ 39,305 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 32,188 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

596 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 5.71 ಲಕ್ಷಕ್ಕೆ ತಲುಪಿದೆ. ಬೆಂಗಳೂರು ನಗರ ಒಂದರಲ್ಲೇ 16,747 ಸೋಂಕಿತರು ಪತ್ತೆಯಾಗಿದ್ದಾರೆ ಹಾಗೂ 14,289 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. 374 ಜನರು ಬೆಂಗಳೂರು ನಗರದಲ್ಲಿ ಸಾವನ್ನಪ್ಪಿದ್ದಾರೆ.

# ಗಂಗೆಯಲ್ಲಿ ತೇಲಿದ 40ಕ್ಕೂ ಹೆಚ್ಚು ಮೃತದೇಹಗಳು

**ಕೊರೊನಾ ಸೋಂಕಿತರನ್ನು ನದಿಗೆ ಎಸೆದ ಶಂಕೆಯಿಂದ ಕಳವಳ**

ಪಾಟ್ನಾ, ಮೇ 10 – ಬಿಹಾರದ ಚೌಸಾ ಎಂಬಲ್ಲಿ ಗಂಗಾ ನದಿಯಲ್ಲಿ ಹತ್ತಾರು ಮೃತದೇಹಗಳು ತೇಲುತ್ತಾ ಬಂದಿರುವುದು ಕಂಡು ಬಂದಿದೆ. ಇದು ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಉತ್ತರ ಪ್ರದೇಶದಿಂದ ಮೃತದೇಹಗಳು ಹರಿದು ಬಂದಿರಬಹುದು. ಕೊರೊನಾ ಸೋಂಕಿತರು ಮೃತಪಟ್ಟಾಗ ಸಂಬಂಧಿಕರು ಅಂತ್ಯಕ್ರಿಯೆ ನಡೆಸಲು ಜಾಗವಿಲ್ಲದೇ ಮೃತದೇಹಗಳನ್ನು ತೇಲಿ ಬಿಟ್ಟಿರಬಹುದು ಎಂದು ಸ್ಥಳೀಯ ಆಡಳಿತ ಶಂಕಿಸುತ್ತಿದೆ. 40-45 ಮೃತದೇಹಗಳು ತೇಲುತ್ತಿವೆ. ಇವುಗಳನ್ನು ನದಿಯಲ್ಲಿ ಎಸೆದಿರಬಹುದು ಎಂದು ಚೌಸಾ ಜಿಲ್ಲಾಧಿಕಾರಿ ಅಶೋಕ್ ಕುಮಾರ್ ತಿಳಿಸಿದ್ದಾರೆ.

ಕನಿಷ್ಠ ಐದು ದಿನಗಳಿಂದ ಮೃತದೇಹಗಳು ನದಿಯಲ್ಲಿ ತೇಲುತ್ತಿರಬಹುದು. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಇನ್ನೋರ್ವ ಅಧಿಕಾರಿ ಕೆ.ಕೆ. ಉಪಾಧ್ಯಾಯ್ ಹೇಳಿದ್ದಾರೆ.

ಕೆಲ ಸುದ್ದಿ ವಾಹಿನಿಗಳು 150 ಮೃತದೇಹಗಳು ತೇಲಿ ಬಂದಿವೆ ಎಂದು ವರದಿ ಮಾಡಿವೆ. ಆದರೆ, ಇದು ಉತ್ಪ್ರೇಕ್ಷಿತ (3ನೇ ಪುಟಕ್ಕೆ)

# ಆಕ್ಸಿಜನ್ ಬೇಡಿಕೆ ಏರಿಕೆ : ಹರಿಹರದಲ್ಲಿ ಸಾಲುಗಟ್ಟಿ ನಿಂತ ವಾಹನಗಳು

ಚಿದಾನಂದ ಎಂ. ಕಂಚಿಕೇರಿ




ಹರಿಹರ, ಮೇ 10- ಕೊರೊನಾ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದು ಹಾಗೂ ಆಕ್ಸಿಜನ್ ಪೂರೈಸುವ ಖಾಸಗಿ ಸಂಸ್ಥೆ ಕಾರ್ಯನಿರ್ವಹಿಸದ ಕಾರಣ ನಗರದ ಆಸ್ಪತ್ರೆಗಳಿಗೆ ಪೂರೈಸುವ ಆಕ್ಸಿಜನ್ ಮೇಲೆ ಒತ್ತಡ ಬಿದ್ದಿದೆ.

ದಾವಣಗೆರೆಯ ಖಾಸಗಿ ಆಸ್ಪತ್ರೆಗಳಿಗೆ ಪ್ರಮುಖವಾಗಿ ಆಕ್ಸಿಜನ್ ಪೂರೈಸುವ ರೇಣುಕಾ ಗ್ಯಾಸ್ ವಿತರಣಾ ಕೇಂದ್ರ ಚಾಲನೆಯಲ್ಲಿ ಇಲ್ಲದಿರುವುದರಿಂದ ಆಕ್ಸಿಜನ್‌ಗೆ ಹರಿಹರದ ಸದರನ್ ಗ್ಯಾಸ್ ಲಿಮಿಟೆಡ್ ಬಳಿ ತೆರಳುವಂತಾಗಿದೆ.

ಸದರನ್ ಗ್ಯಾಸ್ ಲಿಮಿಟೆಡ್‌ಗೆ ಆಕ್ಸಿಜನ್ ವಿತರಣೆ ಮಾಡುವಂತೆ ಬಹಳ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಬಂದಿರುವುದರಿಂದ ಜಿಲ್ಲೆಯಲ್ಲಿ ಇರುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಆಕ್ಸಿಜನ್ ಕೊರತೆ ಆಗದಂತೆ ಗಮನ ಹರಿಸಲು ದಾವಣಗೆರೆ ಪ್ರೊಬೇಷನರಿ ಉಪ ವಿಭಾಗಾಧಿಕಾರಿ ವೀರೇಶ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಿಪಿಐ ಸತೀಶ್ ಕುಮಾರ್, ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಡಿ. ರವಿಕುಮಾರ್ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಹರಿಹರ ನಗರದಿಂದ ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಇರುವ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿನ ರೋಗಿಗಳಿಗೆ ಆಕ್ಸಿಜನ್ ಸರಬರಾಜಾಗುತ್ತದೆ. ಈ ಸಂಸ್ಥೆಯ ಮುಂದೆ ಭಾರೀ ವಾಹನಗಳು ಆಕ್ಸಿಜನ್ ಗಾಗಿ ಸಾಲಿನಲ್ಲಿ ನಿಂತಿವೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಇಲ್ಲಿನ ಸ್ಥಳೀಯ ಅಧಿಕಾರಿಗಳಾದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹಾಗೂ ಸಿಪಿಐ ಸತೀಶ್ ಕುಮಾರ್‌ರವರಿಗೆ ಸ್ಥಳದಲ್ಲಿಯೇ ಇದ್ದು ದಾವಣಗೆರೆ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಿಗೆ ಆಕ್ಸಿಜನ್ ಕೊರತೆ ಬರದಂತೆ ನೋಡಿಕೊಳ್ಳಬೇಕೆಂದು ಸೂಚನೆ ನೀಡಿದ್ದಾರೆ.

**ಸದರನ್ ಲಿ. ಬಳಿಯೇ ಮೊಕ್ಕಾಂ ಹೂಡಿರುವ ಅಧಿಕಾರಿ ವರ್ಗ**

ದಾವಣಗೆರೆ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಆಕ್ಸಿಜನ್ ಸಾಗಿಸುವ ವಾಹನವನ್ನು ಪೊಲೀಸ್ ಭದ್ರತೆಯ ಮೂಲಕ ತಲುಪಿಸಲಾಗುತ್ತಿದೆ.

ಸದರನ್ ಗ್ಯಾಸ್ ಏಜೆನ್ಸಿಗೆ ಬಳ್ಳಾರಿಯ ಜಿಂದಾಲ್ ಕಂಪನಿಯ ಮೂಲಕ ನೇರವಾಗಿ ದಿನಕ್ಕೆ 18.5 ಟನ್ ಆಕ್ಸಿಜನ್ ಸರಬರಾಜಾಗುತ್ತಿದ್ದು, ಅದರಲ್ಲಿ ದಾವಣಗೆರೆ ಸಿಜಿ ಆಸ್ಪತ್ರೆಗೆ 6 ಟನ್ ಹಾಗೂ ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಗೆ 4 ಟನ್ ಸರಬರಾಜು ಆಗುತ್ತಿದೆ. ಇದರ ಜೊತೆಗೆ ದಾವಣಗೆರೆ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ಇಲ್ಲಿಂದಲೇ ಪ್ರಾಣವಾಯು ಸರಬರಾಜಾಗುತ್ತಿದೆ. ಮೊದಲು ಖಾಸಗಿ ಆಸ್ಪತ್ರೆಯವರಿಂದ 10 ರಿಂದ 15 ಆಕ್ಸಿಜನ್ ಸಿಲಿಂಡರ್‌ಗೆ ಬೇಡಿಕೆ ಇರುತ್ತಿತ್ತು. ಆದರೆ ಕೊರೊನಾ ರೋಗಿಗಳ ಪ್ರಮಾಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ದಿನಕ್ಕೆ 40 ರಿಂದ 50 ಸಿಲಿಂಡರ್‌ಗಳ ಬೇಡಿಕೆ ಇದೆ. ಸದ್ಯಕ್ಕೆ ಬೇಡಿಕೆಗೆ ತಕ್ಕಂತೆ ಆಕ್ಸಿಜನ್ ಶೇಖರಿಸಿಡಲು ಸದರನ್ ಏಜೆನ್ಸಿಯಲ್ಲಿ ಆಕ್ಸಿಜನ್ ಶೇಖರಣಾ ಘಟಕದ ಕೊರತೆ ಇದೆ. ಪ್ರಸ್ತುತ ದಾವಣಗೆರೆಯ (3ನೇ ಪುಟಕ್ಕೆ)

# ಅನವಶ್ಯವಾಗಿ ತಿರುಗಾಡಿದ ಸವಾರರಿಗೆ ಲಾಠಿ ರುಚಿ

**ಜಗಳೂರು**

ಜಗಳೂರು, ಮೇ 10- ರಾಜ್ಯದಲ್ಲಿ ಕಟ್ಟು ನಿಟ್ಟಿನ 2 ವಾರಗಳ ಕಾಲ ಸರ್ಕಾರ ಲಾಕ್‌ಡೌನ್ ವಿಧಿಸಿದ ಹಿನ್ನೆಲೆಯಲ್ಲಿ ಜಗಳೂರು ಪಟ್ಟಣದಲ್ಲಿ 10 ಗಂಟೆಯ ಮೇಲೆ ಅನವಶ್ಯಕವಾಗಿ ಹೊರಗೆ ಬೈಕ್ ಸೇರಿದಂತೆ ಇತರೆ ವಾಹನಗಳಲ್ಲಿ ಬರುತ್ತಿರುವ ಜನರಿಗೆ ಸಿಪಿಐ ಮಂಜುನಾಥ್ ಪಂಡಿತ್ ನೇತೃತ್ವದಲ್ಲಿ ಪಿಎಸ್‌ಐ, ಪೊಲೀಸ್ ಸಿಬ್ಬಂದಿ ಎಚ್ಚರಿಕೆ ನೀಡಿದರಲ್ಲದೇ ಅನವಶ್ಯವಾಗಿ ತಿರುಗಾಡಿದ ಬೈಕ್ ಸವಾರರಿಗೆ ಬೆತ್ತದ ರುಚಿ ತೋರಿಸಿದರು.



ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆ, ಪಟ್ಟಣದ ಖಾಸಗಿ ಆಸ್ಪತ್ರೆ ಮುಂಭಾಗ ಬೈಕ್, ವಾಹನಗಳೊಂದಿಗೆ ವೈದ್ಯರ ಹತ್ತಿರ ಮಹಿಳೆಯರು, ಪುರುಷರು ಹಾಗೂ ಸಣ್ಣ ಮಕ್ಕಳನ್ನು ತೋರಿಸಲು ಸಾಲು ಸಾಲಾಗಿ ನಿಂತು ತೋರಿಸುತ್ತಿದ್ದ ದೃಶ್ಯ ಕಂಡು ಬಂದಿತು. ಪೊಲೀಸರು ಅನವಶ್ಯಕವಾಗಿ ತಿರುಗಾಡುವವರ ವಾಹನ ಸೀಜ್ ಮಾಡುವ ಜೊತಗೆ ಆಸ್ಪತ್ರೆಗೆ ಹೋಗುವವರಿಗೆ ಎಚ್ಚರಿಕೆ ನೀಡಿ ಕಳಿಸುತ್ತಿದ್ದರು.

ಪಟ್ಟಣದ ಬೆಸ್ಕಾಂ ಇಲಾಖೆ, ಚಳ್ಳಕೆರೆ ರಸ್ತೆ, ಕೊಟ್ಟೂರು ಕಡೆ ಹೋಗುವ ರಸ್ತೆ, ಹಳೆಯ ಮಹಾತ್ಮ ಗಾಂಧಿ ಬಸ್ ನಿಲ್ದಾಣದ ಹತ್ತಿರ ಪೊಲೀಸರು ಅಡ್ಡಲಾಗಿ ಬ್ಯಾರಿಕೇಡ್ ಹಾಕಿ ತಪಾಸಣೆ ಮಾಡಿ, ಅನವಶ್ಯಕವಾಗಿ ತಿರುಗಾಡುವವರಿಗೆ ಬಿಸಿ ಮುಟ್ಟಿಸುತ್ತಿದ್ದರು. ಕಂದಾಯ ಇಲಾಖೆಯ ಕೆಲವು ನೌಕರರು ಬ್ಯಾಡ್ಜ್ ಇಲ್ಲದೇ ಹೋಗುತ್ತಿರುವಾಗ ಗೊತ್ತಾಗದೆ ಪೊಲೀಸರು ಲಾಟಿ ಏಟಿನ ಬಿಸಿ ತೋರಿಸಿದ್ದಾರೆ. ಲಾಕ್‌ಡೌನ್ ಹಿನ್ನೆಲೆಯಲ್ಲಿ ಮೆಡಿಕಲ್ ಶಾಪ್‌ಗಳು, ಬ್ಯಾಂಕುಗಳು, ಸಾರ್ವಜನಿಕ ಕಚೇರಿಗಳು ಎಂದಿನಂತೆ ತೆರೆದಿದ್ದವು.

**ಸ್ಯಾನಿಟೈಜರ್ ಮಾಡದೇ ಪ.ಪಂ ನಿರ್ಲಕ್ಷ್ಯ :** ಪಟ್ಟಣದಲ್ಲಿ ಕೊರೊನಾ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಲ್ಲದೇ ಸಾವಿನ ಸಂಖ್ಯೆ ಹೆಚ್ಚಾದರೂ ಪಟ್ಟಣ ಪಂಚಾಯಿತಿ ಹಾಗೂ ತಾಲ್ಲೂಕು ಆಡಳಿತ ಸ್ಯಾನಿಟೈಜರ್ ಮಾಡದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ನಾಗರಿಕರು ದೂರಿದ್ದಾರೆ.

ಕಳೆದ ವರ್ಷ ಪಟ್ಟಣದಲ್ಲಿ ಕೊರೊನಾ ಉಲ್ಬಣಗೊಂಡಾಗ 2 ಬಾರಿ ಫೈರ್ ಇಂಜಿನ್ ಟ್ಯಾಂಕರ್ ಮೂಲಕ ವಿವಿಧ ಬಡಾವಣೆಗಳಲ್ಲಿ ಸ್ಯಾನಿಟೈಜರ್ ಸಿಂಪಡಿಸಿ, ರೋಗ ಹರಡದಂತೆ ತಡೆಗಟ್ಟಲಾಗಿತ್ತು. ಆದರೆ, 2021 ರಲ್ಲಿ ಪಟ್ಟಣದಲ್ಲಿ ಸಾವಿನ ಸಂಖ್ಯೆ, ಕೊರೊನಾ ಹೆಚ್ಚಾಗಿ ಹರಡುತ್ತಿದ್ದರೂ ಇದುವರೆಗೆ ಯಾವುದೇ ಮುಂಜಾಗೃತಾ ಕ್ರಮಕೈಗೊಳ್ಳುತ್ತಿಲ್ಲ ಎಂದು ಪಟ್ಟಣದ ನಾಗರಿಕರು ಅಳಲು ತೋಡಿಕೊಂಡಿದ್ದಾರೆ.

**ಎಣ್ಣೆ ಖರೀದಿಗೆ ಮುಗಿ ಬಿದ್ದ ಜನರು :** ಕಳೆದ ಬಾರಿ ಎಣ್ಣೆ ಸಿಗದೇ ಭಾರೀ ಪರದಾಡಿದ್ದರು. ಈಗ ಇಂದಿನಿಂದಲೇ 14 ದಿನಗಳ ಕಾಲ ಸಂಪೂರ್ಣ ಲಾಕ್ ಡೌನ್ ಆಗುತ್ತಂತೆ ಎಣ್ಣೆ ಸಿಗುತ್ತೋ ಇಲ್ಲವೋ ಗೊತ್ತಿಲ್ಲ. ಈಗಾಗಲೇ ಸ್ಟಾಕ್ ಮಾಡಿಕೊಂಡು ಬಿಡೋಣ ಎಂದು ಮದ್ಯ ಪ್ರಿಯರು ಬೆಳಿಗ್ಗೆಯಿಂದಲೇ ಮದ್ಯದಂಗಡಿಗಳ ಮುಂದೆ ನಿಂತು ಮದ್ಯ ಖರೀದಿಸುತ್ತಿದ್ದ ದೃಶ್ಯಗಳು ಪಟ್ಟಣದಲ್ಲಿ ಸಾಮಾನ್ಯವಾಗಿದ್ದವು.

ಬೆಳಿಗ್ಗೆ ಅಗತ್ಯ ವಸ್ತುಗಳಿಗೆ ಎಂದು ಕೆಲವರು ಪಟ್ಟಣಕ್ಕೆ ಬಂದರೆ, ಇನ್ನು ಕೆಲವರು ಎಣ್ಣೆ ಬಾಟಲಿಗಳನ್ನು ಖರೀದಿಸಿ ಕೊಂಡೊಯ್ಯುತ್ತಿದ್ದ ದೃಶ್ಯ ನಗರದ ವಿವಿಧೆಡೆ ಕಂಡುಬಂದವು. ಕಳೆದ ಬಾರಿ ಮದ್ಯವೂ ಸಹ ಬಂದ್ ಆಗಿದ್ದು, ಕೆಲವರಂತೂ ಪರದಾಡಿದ ಘಟನೆಗಳು ಮದ್ಯಪ್ರಿಯರ ಕಣ್ಮುಂದಿವೆ. ಈ ಬಾರಿ ಇಂತಹ ಅನಾಹುತಗಳು ಆಗಬಾರದೆಂದು ಮುಂಜಾಗ್ರತಾ ಕ್ರಮವಾಗಿ ಮದ್ಯ ಶೇಖರಿಸಿಟ್ಟು ಕೊಳ್ಳುತ್ತಿದ್ದಾರೆ.

# ಲಸಿಕೆ ಹಾಕಿಸಿಕೊಂಡಿದ್ದೇವೆಂದು ನಿರ್ಲಕ್ಷಿಸದಿರಲು ಕರೆ



ಮಲೇಬೆನ್ನೂರು

ಮಲೇಬೆನ್ನೂರು, ಮೇ.10 - ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದೇವೆಂದು ಯಾರೂ ನಿರ್ಲಕ್ಷ್ಯ ಮಾಡದೆ ಕೊರೊನಾ ಬಗ್ಗೆ ಸದಾ ಎಚ್ಚರವಾಗಿರಬೇಕೆಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಹೇಳಿದರು.

ಅವರು ಕುಂಬಳೂರು ಗ್ರಾ.ಪಂ. ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಕೊರೊನಾ ಜಾಗೃತಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ರೋಗ ನಿರೋಧಕ ಶಕ್ತಿಯಾಗಿ ಲಸಿಕೆ ಕೆಲಸ ಮಾಡಲಿದೆ.

ಎರಡೂ ಡೋಸ್ ಪಡೆದ ಸ್ವಲ್ಪ ದಿನಗಳ ನಂತರ ಲಸಿಕೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಕೊರೊನಾ ಬಂದವರೆಲ್ಲಾ ಸಾಯುವುದಿಲ್ಲ, ರೋಗ ನಿರೋಧಕ ಶಕ್ತಿ ಇಲ್ಲದವರಿಗೆ ಸ್ವಲ್ಪ ತೊಂದರೆ ಆಗುತ್ತದೆ, ಕೊರೊನಾ ಸೋಂಕು ತಗುಲಿದ್ದರೂ ಸರಿಯಾದ ಚಿಕಿತ್ಸೆ ಪಡೆದು ಕೊಳ್ಳದೆ ನಿರ್ಲಕ್ಷ್ಯ ಮಾಡಿದ ವರಿಗೆ ಬಹಳ ತೊಂದರೆ ಆಗಿದೆ ಎಂದು ಡಾ. ಲಕ್ಷ್ಮಿದೇವಿ ತಿಳಿಸಿದರು.

ಗ್ರಾ.ಪಂ ಅಧ್ಯಕ್ಷೆ ಲೀಲಾ ಶಿವಕುಮಾರ್, ಗ್ರಾ.ಪಂ. ಸದಸ್ಯೆ ಶ್ರೀಮತಿ ಮಧು, ಪಿಡಿಓ ಮೂರ್ತಿ, ಗ್ರಾಮ ಲೆಕ್ಕಾಧಿಕಾರಿ ಶ್ರೀಧರ್‌ಮೂರ್ತಿ ಸೇರಿದಂತೆ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಕಾರ್ಯಕರ್ತೆಯರು ಸಭೆಯಲ್ಲಿದ್ದರು.

# ಮಲೇಬೆನ್ನೂರು : ಆಸ್ತಿ ತೆರಿಗೆ ರಿಯಾಯ್ತಿ ಪಾವತಿ ವಿಸ್ತರಣೆ

ಮಲೇಬೆನ್ನೂರು, ಮೇ 10- ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲೀಕರಿಗೆ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಶೇ. 5 ರ ರಿಯಾಯಿತಿಯಲ್ಲಿ ಪಾವತಿಸಲು ಏಪ್ರಿಲ್ ಅಂತ್ಯದವರೆಗೆ ಕಾಲಾವಕಾಶ ನೀಡಲಾಗಿತ್ತು. ಆದರೆ, ಕೋವಿಡ್ ಹಿನ್ನೆಲೆಯಲ್ಲಿ ಆಸ್ತಿ ತೆರಿಗೆ ಮೇಲಿನ ಶೇ. 5 ರಿಯಾಯ್ತಿಯನ್ನು ಸರ್ಕಾರದ ಆದೇಶದಂತೆ ಜೂನ್ 30 ರವರೆಗೆ ವಿಸ್ತರಿಸಲಾಗಿರುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಪಾವತಿಸುವಂತೆ ಪುರಸಭೆ ಮುಖ್ಯಾಧಿಕಾರಿ ದಿನಕರ್ ತಿಳಿಸಿದ್ದಾರೆ.

# 18 ಬೈಕ್‌ಗಳ ವಶ, 28 ಜನರಿಗೆ ದಂಡ



**ಹೊನ್ನಾಳಿ ತಾಲ್ಲೂಕು**

ಹೊನ್ನಾಳಿ, ಮೇ 10- ಲಾಕ್ ಡೌನ್‌ನ ಮೊದಲನೇ ದಿನದ ಬೆಳ್ಳಂಬೆಳಿಗ್ಗೆ ರಸ್ತೆಗಿಳಿದ ಹೊನ್ನಾಳಿ ಪಿಎಸ್‌ಐ ಬಸನಗೌಡ ಬಿರಾದಾರ್ ನೇತೃತ್ವದ ಪೊಲೀಸ್ ಅಧಿಕಾರಿಗಳ ತಂಡ ಅನವಶ್ಯಕವಾಗಿ ತಿರುಗಾಡುತ್ತಿದ್ದ 18 ಬೈಕ್‌ಗಳನ್ನು ವಶಪಡಿಸಿಕೊಂಡು ಮಾಸ್ಕ್ ಧರಿಸದೇ ಅಡ್ಡಾಡುತ್ತಿದ್ದ 28 ಜನರಿಗೆ ದಂಡ ವಿಧಿಸಿ, ಬಿಸಿ ಮುಟ್ಟಿಸಿದ ಪ್ರಸಂಗ ಸೋಮವಾರ ನಡೆದಿದೆ.

ಜನತಾ ಕರ್ಫ್ಯೂ ವಿಫಲಗೊಂಡ ಹಿನ್ನೆಲೆಯಲ್ಲಿ ಸರ್ಕಾರ ಜನತಾ ಕರ್ಫ್ಯೂವನ್ನು ಮಧ್ಯದಲ್ಲೇ ನಿಲ್ಲಿಸಿ, ಇಂದಿನಿಂದ ಮೇ 24 ರವರೆಗೆ 15 ದಿನಗಳ ಕಠಿಣ ಕರ್ಫ್ಯೂವನ್ನು ಸರ್ಕಾರ ಇಂದು ಬೆಳಿಗ್ಗೆ 6 ರಿಂದ ಜಾರಿಗೊಳಿಸಲಾಗಿದ್ದರ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳ ತಂಡದವರು ಪಟ್ಟಣದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾದರು.

ಅಗತ್ಯ ವಸ್ತುಗಳ ಖರೀದಿಗೆ ಜನರ ಸಂಚಾರ ಎಂದಿನಂತೆ ಕಂಡುಬಂದಿತು.

ಪಿಎಸ್‌ಐ ಬಸನಗೌಡ ಬಿರಾದಾರ ಸುದ್ದಿಗಾರರೊಂದಿಗೆ ಮಾತನಾಡಿ, ಪಟ್ಟಣದ ಜನತೆ ಮನೆಯಿಂದ ಅನವಶ್ಯಕವಾಗಿ ಹೊರಬರದೇ ಸಹಕಾರ ನೀಡಿದ್ದಾರೆ ಎಂದು ಹೇಳಿದರು.

**ಚೆಕ್ ಪೋಸ್ಟ್‌ಗಳಲ್ಲಿ ಬಿಗಿ ಕ್ರಮ :** ಹೊನ್ನಾಳಿ ತಾಲ್ಲೂಕಿನ ಹೊಳೆಹರಳಹಳ್ಳಿ, ಅರಕೆರೆ ತಾಂಡಾ, ಕುಳಗಟ್ಟೆ ಕ್ರಾಸ್ ಹಾಗೂ ನ್ಯಾಮತಿ ತಾಲ್ಲೂಕಿನ ಟಿ.ಜಿ.ಹಳ್ಳಿ, ಸವಳಂಗ, ಜೀನಹಳ್ಳಿ ಕ್ರಾಸ್ ಸೇರಿದಂತೆ ಒಟ್ಟು 6 ಕಡೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ತುರ್ತು ಪರಿಸ್ಥಿತಿ ಹೊರತುಪಡಿಸಿ, ಅನಗತ್ಯವಾಗಿ ಅಂತರ ರಾಜ್ಯ ಮತ್ತು ಅಂತರ್ ಜಿಲ್ಲೆಗಳ ವಾಹನಗಳು ಸಂಚರಿಸ ದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಸಿಪಿಐ ಟಿ.ವಿ. ದೇವರಾಜ್ ಮಾಹಿತಿ ನೀಡಿದರು.

ನಡೆದುಕೊಂಡು ವಸ್ತುಗಳನ್ನು ತರಲು ಸಾಧ್ಯವಾಗುತ್ತಿಲ್ಲ ಎಂದು ಸರ್ಕಾರದ ನಿರ್ಧಾರಕ್ಕೆ ಸಾರ್ವಜನಿಕರು ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಿರುವ ಪ್ರಸಂಗಗಳು ನಡೆದವು.

ಈ ಸಂದರ್ಭದಲ್ಲಿ ಪುರಸಭಾ ಆರೋಗ್ಯ ನಿರೀಕ್ಷಕ ನಾಗೇಶ್, ಪ್ರೊಬೇಷನರಿ ಎಸ್‌ಐ ಶರಣಬಸಪ್ಪ, ಸಿಬ್ಬಂದಿಗಳಾದ ಜಗದೀಶ್, ವೆಂಕಟೇಶ್, ಸುನಿಲ್, ಚೇತನ್, ಗಣೇಶ್, ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

# ರಂಗಭೂಮಿ ಕಲಾವಿದರ ಬದುಕು ದುಸ್ತರ : ಧನ ಸಹಾಯಕ್ಕೆ ಮೊರೆ

ದಾವಣಗೆರೆ,ಮೇ 10- ಕೊರೊನಾ ವೈರಸ್ ನಿಂದ ಆಗಿರುವ ಲಾಕ್ ಡೌನ್ ಪರಿಣಾಮ ರಂಗಭೂಮಿ ಕಲಾವಿದರ ಬದುಕು ದುಸ್ತರವಾಗಿದ್ದು, ಜಿಲ್ಲಾಡಳಿತ ಸೂಕ್ತ ಪರಿಹಾರ ನೀಡುವಂತೆ ಹಿರಿಯ ರಂಗಭೂಮಿ ಕಲಾವಿದ ಕೆ. ವೀರಯ್ಯ ಸ್ವಾಮಿ ಒತ್ತಾಯಿಸಿದ್ದಾರೆ.

ರಂಗಭೂಮಿ ಕಲಾವಿದರು ನಾಟಕಗಳನ್ನು ನಂಬಿಕೊಂಡೇ ಜೀವನ ಮಾಡುತ್ತಿದ್ದಾರೆ. ಲಾಕ್ ಡೌನ್ ನಿಂದಾಗಿ ಎಲ್ಲೂ ನಾಟಕಗಳು ನಡೆಯದ ಕಾರಣ, ಜೀವನ ನಡೆಸುವುದು ತುಂಬಾ ಕಷ್ಟಕರವಾಗಿದೆ ಎಂದು ಅವರು ಹೇಳಿದ್ದಾರೆ.

ಈ ಕಲಾವಿದರು ನಿಗದಿತ ಸಮಯದಲ್ಲಿ ಊಟ ಮತ್ತು ನಿದ್ದೆ ಇಲ್ಲದೇ ನಾಟಕಗಳಲ್ಲಿ ಪಾತ್ರವನ್ನು ನಿರ್ವಹಿಸುತ್ತಿರುವುದರಿಂದ ಸಹಜವಾಗಿ ಬಹುತೇಕರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇದರಿಂದ ಆಸ್ಪತ್ರೆಯ ಖರ್ಚು - ವೆಚ್ಚಗಳನ್ನು ಭರಿಸಲು ಸಾಧ್ಯವಾಗದಿರುವಂತಹ ಸ್ಥಿತಿಯಲ್ಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಂಘ-ಸಂಸ್ಥೆಗಳು, ದಾನಿಗಳು ಆಹಾರದ ಕಿಟ್ ಗಳನ್ನು ಕೊಡುವುದರ ಬದಲು ಧನ ಸಹಾಯ ಮಾಡಿದ್ದಲ್ಲಿ ಔಷಧೋಪಚಾರಕ್ಕೆ ಅನುಕೂಲವಾಗುತ್ತದೆ. ಕಾರಣ, ದಾನಿಗಳು ಕಲಾವಿದರ ನೆರವಿಗೆ ಧಾವಿಸಬೇಕು ಎಂದು ವೀರಯ್ಯ ಸ್ವಾಮಿ ಕೇಳಿಕೊಂಡಿದ್ದಾರೆ.

# ನಗರದಲ್ಲಿ ಸರಳ ಬಸವ ಜಯಂತಿ

ದಾವಣಗೆರೆ, ಮೇ 10- ಬಸವ ಜಯಂತಿ ಪ್ರಾರಂಭಿಸಿದ ಐತಿಹಾಸಿಕ ನಗರದ ಶ್ರೀ ವಿರಕ್ತ ಮಠದಲ್ಲಿ ಇದೇ ದಿನಾಂಕ 14ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತದೆ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

# ಕೊರೊನಾ ಲಸಿಕೆಯಲ್ಲಿ 'ಅತ್ಯುತ್ಸಾಹದ ನ್ಯಾಯಿಕ ಪ್ರವೇಶ'ಕ್ಕೆ ಕೇಂದ್ರದ ವಿರೋಧ

ನವದೆಹಲಿ, ಮೇ 10 - ಕೇಂದ್ರ ಸರ್ಕಾರ ನ್ಯಾಯೋಚಿತ, ಸಮಾನತೆ ಹಾಗೂ ಪಕ್ಷಪಾತ ರಹಿತವಾಗಿ ಕೊರೊನಾ ಲಸಿಕೆ ಸೂತ್ರವನ್ನು ರೂಪಿಸಿದೆ. ಈ ವಿಷಯದಲ್ಲಿ ಅತ್ಯುತ್ಸಾಹದಿಂದ ನ್ಯಾಯಿಕ ಮಧ್ಯ ಪ್ರವೇಶವಾದರೆ ಊಹಿಸಲಾಗದ ಪರಿಣಾಮಗಳಾಗಬಹುದು ಎಂದು ಕೇಂದ್ರ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಸಿದೆ.

ಲಸಿಕೆ ವಿತರಣೆ ಕುರಿತು ಸುಪ್ರೀಂ ಕೋರ್ಟ್ ಕೇಳಿದ ಪ್ರಶ್ನೆಗಳಿಗೆ ಪ್ರಮಾಣ ಪತ್ರ ಸಲ್ಲಿಸಿರುವ ಕೇಂದ್ರ ಸರ್ಕಾರ, ಒಂದೇ ಬಾರಿಗೆ ಇಡೀ ದೇಶಕ್ಕೆ ಲಸಿಕೆ ಪೂರೈಸಲು ಸಾಧ್ಯವಾಗದು. ಲಸಿಕೆ ಸೀಮಿತವಾಗಿ ಲಭ್ಯವಿರುವುದರಿಂದ ಸೋಂಕಿನ ಹೆಚ್ಚು ಅಪಾಯವಿರುವವರಿಗೆ ಮೊದಲು ನೀಡಲಾಗುವುದು ಎಂದು ಹೇಳಿದೆ.

ಕೊರೊನಾ ಎದುರಿಸಲು ಅಗತ್ಯ ಸರಕುಗಳ ಪೂರೈಕೆಗಾಗಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ವಿಚಾರಣೆ ನಡೆಸುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವು ತಿಳಿಸಿದೆ. ಆಕ್ಸಿಜನ್ ಪೂರೈಕೆಗೆ ಸಂಬಂಧಿಸಿದಂತೆಯೂ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

ನ್ಯಾಯಾಲಯ ಸದುದ್ದೇಶ ಹೊಂದಿದ್ದರು, ಅತ್ಯುತ್ಸಾಹದಿಂದ ಲಸಿಕೆ ವಿಷಯದಲ್ಲಿ ಮಧ್ಯ ಪ್ರವೇಶಿಸಿದರೆಊಹಿಸಲಾಗದಪರಿಣಾಮಗಳಾಗಬಹುದು. ಪರಿಣಿತರು, ಆಡಳಿತ ಅನುಭವವಿರುವವರು, ವೈದ್ಯರು, ವಿಜ್ಞಾನಿಗಳು ಹಾಗೂ ಕಾರ್ಯಾಂಗವನ್ನು ಹೊರತಾಗಿರಿಸಿ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗದು ಎಂದು ಕೇಂದ್ರ ಸರ್ಕಾರ ಹೇಳಿದೆ.

ದೇಶ ಅಭೂತಪೂರ್ವ ಹಾಗೂ ಗಂಭೀರ ಬಿಕ್ಕಟ್ಟು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ವಿಶಾಲವಾದ ಹಿತದೃಷ್ಟಿಯಿಂದ ನೀತಿಗಳನ್ನು ರೂಪಿಸುವುದನ್ನು ಸರ್ಕಾರದ ವಿವೇಚನೆಗೆ ಬಿಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

# ನಿಯಮ ಉಲ್ಲಂಘಿಸಿದ 100 ಕ್ಕೂ ಹೆಚ್ಚು ಬೈಕ್ ಮತ್ತು ಆಟೋಗಳ ವಶ



ಹರಪನಹಳ್ಳಿ, ಮೇ 10- ಲಾಕ್‌ಡೌನ್ ಜಾರಿಯಲ್ಲಿ ಕುಂಟು ನೆಪಗಳನ್ನು ಹೇಳಿ ಓಡಾಟ ನಡೆಸುವವರ ಮೇಲೆ ಪೊಲೀಸರು ಲಾಠಿ ರುಚಿ ತೋರಿಸಿದ್ದಾರೆ. ನಿಯಮ ಉಲ್ಲಂಘಿಸಿ ಅನಗತ್ಯವಾಗಿ ಬೀದಿಗಳಿದ 100 ಕ್ಕೂ ಹೆಚ್ಚು ಬೈಕ್ ಮತ್ತು ಆಟೋಗಳನ್ನು ಸೀಜ್ ಮಾಡಲಾಗಿದೆ.

ಡಿವೈಎಸ್‌ಪಿ ಹಾಲಮೂರ್ತಿ ರಾವ್ ಮಾತನಾಡಿ, ಪಟ್ಟಣದ ಐ.ಬಿ. ವೃತ್ತ. ಬಸ್ ಸ್ಟ್ಯಾಂಡ್, ಹಿರೇಕೆರೆ ವೃತ್ತ. ಕೊಟ್ಟೂರು ವೃತ್ತಗಳಲ್ಲಿ ಅವಧಿ ಮೀರಿ ಓಡಾಡುವ ವಾಹನ ಸವಾರರಿಗೆ ದಂಡ ವಿಧಿಸಲಾಗಿದೆ.

ಕೊರೊನಾ ವೈರಸ್ ತಡೆಗೆ ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ, ವೃತ್ತ ನಿರೀಕ್ಷಕ ನಾಗರಾಜ್ ಎಂ. ಕಮ್ಮಾರ್, ತಹಶೀಲ್ದಾರ್ ಎಂ.ಎಲ್ ನಂದೀಶ್, ಪಿಎಸ್‌ಐ ಸಿ. ಪ್ರಕಾಶ್, ಆರೋಗ್ಯಾಧಿಕಾರಿ ವೆಂಕಟೇಶ್, ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜ್ ನಾಯ್ಕ್, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಈಶ್ವರ ಪ್ರಸಾದ್ ನೇತೃತ್ವದ ತಂಡಗಳು ತಾಲ್ಲೂಕಿನಾದ್ಯಂತ ತೀವ್ರ ಕಟ್ಟೆಚ್ಚರ ವಹಿಸಿದೆ.

# ಕೂಡ್ಲಿಗಿಯ ನೆಲಬೊಮ್ಮನಹಳ್ಳಿಯಲ್ಲಿ ಸಿಡಿಲಿಗೆ ಮೇಕೆಗಳ ಬಲಿ



ಕೂಡ್ಲಿಗಿ, ಮೇ 10- ಕೆಲದಿನಗಳ ಹಿಂದಷ್ಟೇ ಸಿಡಿಲು ಗ್ರಾಮದ ಇಬ್ಬರು ಕುರಿಗಾಹಿಗಳನ್ನು ಬಲಿ ತೆಗೆದುಕೊಂಡ ಘಟನೆ ಮಾಸುವ ಮುನ್ನವೇ ಇಂದು ಮಧ್ಯಾಹ್ನ ಸಿಡಿಲ ಹೊಡೆತಕ್ಕೆ 18 ಮೇಕೆಗಳು ಬಲಿಯಾದ ಘಟನೆ ತಾಲ್ಲೂಕಿನ ನೆಲಬೊಮ್ಮನಹಳ್ಳಿಯಲ್ಲಿ ಜರುಗಿದೆ.

ಸಿಡಿಲ ಹೊಡೆತಕ್ಕೆ ಭೀಮಸಮುದ್ರದ ಮನೆ ಮುಂದಿನ ತೆಂಗಿನ ಮರಕ್ಕೆ ಬೆಂಕಿ ಬಿದ್ದಿದೆ. ನೆಲಬೊಮ್ಮನಹಳ್ಳಿ ಬಾಲರಾಜ ಎಂಬಾತನಿಗೆ ಸೇರಿದ ಮೇಕೆಗಳು ಇಂದು ಮಧ್ಯಾಹ್ನ ಗ್ರಾಮದ ಹೊರವಲಯದ ಹೊಲಗಳ ಬದುಗಳಲ್ಲಿ ಮೇಯುತ್ತಿರುವಾಗ ಮಳೆ ಗಾಳಿ ರಭಸಕ್ಕೆ ಜೋರಾಗಿ ಬಡಿದ ಸಿಡಿಲು 18 ಮೇಕೆಗಳ ಮೇಲೆರಗಿದೆ. ಸ್ಥಳದಲ್ಲೇ ಅವುಗಳು ಸಾವನ್ನಪ್ಪಿವೆ ಎಂದು ತಿಳಿದು ಬಂದಿದೆ.

ಘಟನಾ ಸ್ಥಳಕ್ಕೆ ಕಂದಾಯ ಇಲಾಖೆಯ ಗುಡೇಕೋಟೆ ಪ್ರಭಾರಿ ಕಂದಾಯ ನಿರೀಕ್ಷಕ ಹರೀಶ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಹೆಚ್ಚಿನ ಮಾಹಿತಿ ಪಡೆದು, ತಹಶೀಲ್ದಾರ್‌ರವರಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದ್ದಾರೆ. ತಾಲ್ಲೂಕಿನ ಭೀಮಸಮುದ್ರದಲ್ಲಿ ರುದ್ರಪ್ಪ ಎಂಬುವರ ಮನೆ ಮುಂದೆ ಇರುವ ತೆಂಗಿನಮರಕ್ಕೆ ಸಿಡಿಲು ಬಡಿದ ಪರಿಣಾಮ ಬೆಂಕಿ ಹತ್ತಿ ಉರಿದಿರುವ ಬಗ್ಗೆ ವರದಿಯಾಗಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್ 'ಬಿ' ಬ್ಲಾಕ್‌ನಲ್ಲಿ ಬಂಟರ ಕಲ್ಯಾಣ ಮಂಟಪ ಸುತ್ತ-ಮುತ್ತ
27x40 East, 28x50 South, 30x50 West, 30x50 East, 40x50 North west Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀಮತಿ ಡಾ. ಶುಕ್ಲ ಶೆಟ್ಟಿ ಮತ್ತು ಶ್ರೀ ಡಾ. ಸುರೇಂದ್ರ ಶೆಟ್ಟಿ ಕುಟುಂಬ ವರ್ಗದವರ ಸೇವಾರ್ಥ
ಸಿಟಿ ಹಾಸ್ಪಿಟಲ್ ಬಿನ್ನಿ ಕಂಪನಿ ರೋಡ್, ದಾವಣಗೆರೆ.
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮನೆ ಬಾಡಿಗೆಗೆ**
ಮನೆ ಲೀಸ್ ಗೆ, ಬಾಡಿಗೆಗೆ ಬೇಕೇ ವಿಚಾರಿಸಿ.
1) duplex ಮನೆ ಬಾಡಿಗೆಗೆ.
2) ಬಂಗ್ಲೆ ಮನೆ ಲೀಸ್ ಗೆ.
3) 1, 2 ಬೆಡ್ ರೂಂ ಮನೆ ಬಾಡಿಗೆಗೆ.
ಕಿರಣ್ ಬೂಸನೂರ್ : 97315-63409

**ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ನಿಮ್ಮ ಬಿಡುವಿನ ಸಮಯದಲ್ಲಿ ಉದ್ಯೋಗ ಮಾಡಿ ಹಣ ಗಳಿಸಲು ಒಂದು ಸುವರ್ಣ ಅವಕಾಶ.
8549054943

**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x55 East, 40 ಅಡಿ ರೋಡಿಗಿದೆ, 30x50 North, 30x50 west, 40x60 North, 50x80 North 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸಮಯ ಬದಲಾವಣೆ**
ಸಕ್ಕರೆ ಕಾಯಿಲೆಯವರ ಅನುಕೂಲಕ್ಕಾಗಿ ಆಲೂರು ಆಸ್ಪತ್ರೆಯು ಬೆಳಿಗ್ಗೆ 7 ರಿಂದ 10 ಗಂಟೆಯವರೆಗೆ ಮತ್ತು ಬೆಳಿಗ್ಗೆ 11 ರಿಂದ 2 ಗಂಟೆಯವರೆಗೆ ಲಭ್ಯವಿರುತ್ತದೆ.
ಮೊ. : 88677 75564

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ನೀರಿನ ತೊಟ್ಟಿಯನ್ನು ಸಿನ್ ಟ್ಯಾಂಕ್ ಮಿಷನ್‌ನಲ್ಲಿ ಕ್ಲೀನಿಂಗ್ ಮಾಡಲಾಗುತ್ತದೆ.**
99863 61250
91132 85992

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಬೇಕಾಗಿದ್ದಾರೆ**
ಮನೆಯಲ್ಲಿ ಮಕ್ಕಳನ್ನು ನೋಡಿಕೊಂಡು ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಸಮಯ: ಸಂಜೆ 5.30 ರಿಂದ ಬೆಳಗ್ಗೆ 9ರ ವರೆಗೆ. ಮನೆಯ ವಿಳಾಸ: ಹೈಟೆಕ್ ಆಸ್ಪತ್ರೆಯ ಹತ್ತಿರ
ಆಸಕ್ತಿ ಇರುವ 40 ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳು ಈ ನಂಬರಿಗೆ ಸಂಪರ್ಕಿಸಿ
83102 57998

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಕೊಳ್ಳೇಗಾಲದಿಂದ ನೇರ ಪರಿಹಾರ**
**ಕೊಳ್ಳೇಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್**
ಶ್ರೀ ರುಂಡ ಮಾಲಿನಿ ಉಪಾಸಕರು, ಶ್ರೀ ದುರ್ಗಾದೇವಿ ಜ್ಯೋತಿಷ್ಯರು. ಪ್ರಸಿದ್ಧ ರಕ್ತಕಾರೇಶ್ವರಿಯ ದಿವ್ಯ ಶಕ್ತಿಗಳಿಂದ ಕಠೋರ ಸಾಧನೆಗಳಿಂದ ಜನರಲ್ಲಿ ಸರ್ವಸಿದ್ದಿ ಜ್ಯೋತಿಷ್ಯ ಸಾಧಕರು ಪಂ.ದುರ್ಗಾ ಪ್ರಸಾದ್ ಗುರೂಜಿ. ನಿಮ್ಮ ಸಮಸ್ಯೆಗಳು ಏನೇ ಇರಲಿ ವೈಷ್ಣವಿ ದೇವಿ ಬಲಿಷ್ಟ ಪೂಜೆಯಿಂದ ಕೇವಲ 3 ದಿನಗಳಲ್ಲಿ 100% ಪರಿಹಾರ ಶತಃಸಿದ್ಧ.
98807 30952

**ಜಮೀನು ಮಾರಾಟಕ್ಕಿದೆ**
ಹರಿಹರ - ದಾವಣಗೆರೆ
74112 50447

**ನಾಯ್ಡು ಹೋಟೆಲ್**
ಪಾರ್ಸಲ್ ವ್ಯವಸ್ಥೆ ಇರುತ್ತದೆ,
ಡೋರ್ ಡೆಲಿವರಿ ಎಕ್ಸ್ ಟ್ರಾ ಚಾರ್ಜ್
08192 234611
80889 56656


## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 09.05.2021ರ ಭಾನುವಾರ ಉಡುಪಿಯಲ್ಲಿ ನಿಧನರಾದ ವರ್ತಕರಾದ

**ದಾವಣಗೆರೆಯ ಶ್ರೀ ಆರ್. ಶ್ರೀನಿವಾಸ್**

ಅವರಿಗೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ, ಮೃತರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

**ಲೇಬರ್ ಕಾಲೋನಿ ಸ್ನೇಹಿತರ ಬಳಗ, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ನಮ್ಮನ್ನಗಲಿದ ಶಿವಮೊಗ್ಗ ತಾಲ್ಲೂಕಿನ ಹಿರಿಯ ಕುಸ್ತಿ ಪಟು

**ಶ್ರೀನಿವಾಸ ಗಂಟ ಶಿನಾ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಬಿ. ವೀರಣ್ಣ, ಹಿರಿಯ ಕುಸ್ತಿ ಪಟು ಅಧ್ಯಕ್ಷರು, ನಾಯಕ ಸಮಾಜ, ದಾವಣಗೆರೆ.**


# ಬ್ರಾಹ್ಮಣ ಸಮಾಜದ ಮುಖಂಡ ಪ್ರಶಾಂತ್ ಭಾದ್ರಿ ನಿಧನ



ದಾವಣಗೆರೆ, ಮೇ 10- ನಗರದ ಬ್ರಾಹ್ಮಣ ಸಮಾಜದ ಯುವ ಮುಖಂಡರೂ ಆದ ಅಡುಗೆ ಕಂಟ್ರ್ಯಾಕ್ಟರ್ ಪ್ರಶಾಂತ್ ಭಾದ್ರಿ ಅವರು ಅಕಾಲಿಕವಾಗಿ ನಿನ್ನೆ ನಿಧನರಾದರು.

ಸುಮಾರು 45 ವರ್ಷದ ಪ್ರಶಾಂತ್, ಫಿಲಂ ಎಂಟರ್‌ಟೈನರ್ ಬ್ಯಾನರ್‌ನಲ್ಲಿ ಶ್ರೀ ಸತ್ಯಬೋಧ ಚರಿತ್ರೆ, ಬಣ್ಣ ಹಚ್ಚಿದ ಬದುಕು ಮುಂತಾದ ಕಿರು ಚಿತ್ರಗಳನ್ನು ನಿರ್ಮಿಸಿದ್ದರು. ಬಡವರು ಹಾಗೂ ಬಡ ಅಡುಗೆ ಭಟ್ಟರ ಬಗ್ಗೆ ಕಳಕಳಿ ಹೊಂದಿದ್ದ ಪ್ರಶಾಂತ್, ಭಟ್ಟರಿಗೆ ಇಎಸ್‌ಐ ಸೌಲಭ್ಯ ಕಲ್ಪಿಸಲು ಶ್ರಮಿಸಿದ್ದರು. ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಮಠ, ವಿಶ್ವ ಮಧ್ವ ಮಹಾ ಪರಿಷತ್‌ನ ಕಾರ್ಯಚಟುವಟಿಕೆಗಳಲ್ಲಿ ಪ್ರಶಾಂತ್ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು ಎಂದು ಮಠದ ವ್ಯವಸ್ಥಾಪಕ ತೀರ್ಥಣ್ಣ ಕಂಬನಿ ಮಿಡಿದಿದ್ದಾರೆ. ಶ್ಯಾಮ್ ಶ್ರೀಧರ್ ಘಟೀಕರ್, ಭರಮಸಾಗರದ ಪತ್ರಕರ್ತ ಬಿ.ಜೆ. ಅನಂತಪದ್ಮನಾಭರಾವ್, ಅಡುಗೆ ಗೋಪಣ್ಣ, ಬಿಳಿಚೋಡು ಶ್ಯಾಮ್, ರಾಜಣ್ಣ ಮತ್ತಿತರರು ಪ್ರಶಾಂತ್ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ಬಿಸಲೇರಿ ಶಿವಪ್ಪ ನಿಧನ



ದಾವಣಗೆರೆ ಸಿಟಿ ಆಂಜನೇಯ ಬಡಾವಣೆ 15 ನೇ ಕ್ರಾಸ್ ವಾಸಿ


**ಶ್ರೀ ಬಿಸಲೇರಿ ಶಿವಪ್ಪ (74)**

ಅವರು ದಿನಾಂಕ 10.05.2021ರಂದು ಸೋಮವಾರ ಬೆಳಗ್ಗೆ 6 ಗಂಟೆಗೆ ನಿಧರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.05.2021ರ ಸೋಮವಾರ ಸಂಜೆ 5 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

ದುಃಖತಪ್ತ ಕುಟುಂಬ ವರ್ಗ

**ಬಿಸಲೇರಿ ಹಾಗೂ ಆವರಗೆರೆ ವಂಶಸ್ಥರು.**

## ವೈ ಬಸವರಾಜ ಶೆಟ್ಟಿ (ವೈಬಿಎಸ್) ನಿಧನ



ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್, 13ನೇ ಮೇನ್, 7ನೇ ಕ್ರಾಸ್, ಹಳೇ ಆರ್‌ಟಿಓ ಆಫೀಸ್ ಹತ್ತಿರದ ವಾಸಿ

**ವೈ ಬಸವರಾಜ ಶೆಟ್ಟಿ**

ಅವರು ದಿನಾಂಕ 10.05.2021ರ ಸೋಮವಾರ ಸಂಜೆ 7.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.05.2021ರ ಮಂಗಳವಾರ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

- ಇಂತಿ ದುಃಖತಪ್ತ ಕುಟುಂಬ ವರ್ಗ

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 10.5.2021ರ ಸೋಮವಾರದಂದು ನಿಧನರಾದ ದಾವಣಗೆರೆ ಬಿಜೆಪಿ ಉತ್ತರ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಉತ್ತರ ಮಂಡಲ ಜಾಲತಾಣ ಪ್ರಮುಖ್

**ಶ್ರೀ ನಾಗರಾಜ್ ಕೆ.ಪಿ.**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

✦ ಎಂ.ಎಸ್. ವಿಠ್ಠಲ್
ಮಾಜಿ ಮಹಾಪೌರರು, ನಗರ ಪಾಲಿಕೆ, ದಾವಣಗೆರೆ
✦ ಬಸವರಾಜಯ್ಯ ✦ ಲಕ್ಷ್ಮಣ್ ಆರ್.
✦ ಜಿ.ವಿ ಗಂಗಾಧರ್ ✦ ಕೆ.ವಿ ರುದ್ರಮುನಿ
✦ ನಾಗರಾಜ್ ✦ ಶಂಕರ್ ✦ ಪ್ರವೀಣ ಆರ್. ವಿ.
✦ ಕೆ.ವಿ ಗುರುರಾಜ್ ಮತ್ತು ಸ್ನೇಹಿತರು

## ಹೆಚ್. ಶಕುಂತಲ ನಿಧನ



ದಾವಣಗೆರೆ ವಾಸಿ, ಅಣಜಿಯ ಶ್ರೀ ಹ್ಯಾಳೇದ ವೀರಪ್ಪ ಶಿವಲಿಂಗಪ್ಪ ಪ್ರೌಢಶಾಲೆಯ ಸಹ ಶಿಕ್ಷಕರಾಗಿದ್ದ ದಿ|| ಹೆಚ್. ಸುಬೇಂದ್ರಪ್ಪ ಅವರ ಪತ್ನಿ, ಶ್ರೀಮತಿ ಹೆಚ್. ಶಕುಂತಲ (69) ಅವರು ದಿನಾಂಕ 10.5.2021ರ ಸೋಮವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.5.2021ರ ಸೋಮವಾರ ಸಂಜೆ 5 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

# ಹೆಚ್ಕೆಆರ್ ನಿಧನಕ್ಕೆ ಟಿ. ಶಂಕ್ರಪ್ಪ ಶೋಕ

ದಾವಣಗೆರೆ, ಮೇ 10- ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಅವರ ನಿಧನಕ್ಕೆ ಮೋತಿ ಸೈಕಲ್ ಮಾರ್ಟ್ ಮಾಲೀಕರೂ, ದೂಡಾ ಮಾಜಿ ಸದಸ್ಯರೂ ಆದ ಟಿ. ಶಂಕ್ರಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ರಾಮಚಂದ್ರಪ್ಪ ಅವರೊಂದಿಗೆ ತಾವೂ ಕೂಡಾ ಮಿಲ್ಲಿನ ಕಾರ್ಮಿಕರಾಗಿದ್ದ ಸಂದರ್ಭವನ್ನು ಮೆಲುಕು ಹಾಕಿರುವ ಶಂಕ್ರಪ್ಪ, ತಮ್ಮಿಬ್ಬರ ನಡುವಿನ ಒಡನಾಟ ಸುದೀರ್ಘ 50 ವರ್ಷಗಳದ್ದು ಎಂದು ಹೇಳಿದ್ದಾರೆ.

# ಯಡಿಯೂರಪ್ಪಗೆ ವರಿಷ್ಠರಿಂದ ಬುಲಾವ್

**(1ನೇ ಪುಟದಿಂದ)** ಈ ಬಾರಿಯೂ ವರಿಷ್ಠರ ಆಹ್ವಾನವನ್ನು ತಿರಸ್ಕರಿಸುತ್ತಾರೋ ಕಾದು ನೋಡಬೇಕಾಗಿದೆ.

ಕರ್ನಾಟಕ ಸೇರಿದಂತೆ ಬಿಜೆಪಿ ಆಡಳಿತವಿರುವ ಮೂರು ರಾಜ್ಯಗಳ ನಾಯಕತ್ವ ಬದಲಾವಣೆಗೆ ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ.

ಯಡಿಯೂರಪ್ಪನವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲೇ ಒಂದೆರಡು ವರ್ಷಗಳ ಕಾಲ ಅಧಿಕಾರದಲ್ಲಿರುವಂತೆ, ನಂತರ ಪಕ್ಷದ ಸಲಹೆಗಳಿಗೆ ಮನ್ನಣೆ ನೀಡಬೇಕೆಂದು ಸೂಚಿಸಲಾಗಿತ್ತು ಎನ್ನಲಾಗಿದೆ.

ಕರ್ನಾಟಕದಲ್ಲಿ ಕೊರೊನಾ ಸೋಂಕು ಅಬ್ಬರಿಸುತ್ತಿದ್ದು, ಸೋಂಕು ತಡೆಯಲು ರಾಜ್ಯ ಸರ್ಕಾರ ಪೂರ್ಣ ವಿಫಲವಾಗಿದೆ ಎಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಮೂಡಿದೆ.

ಸಚಿವ ಸಂಪುಟದಲ್ಲಿ ಮತ್ತು ಅಧಿಕಾರಿಗಳಲ್ಲಿ ಗೊಂದಲ ಮತ್ತು ಸಮನ್ವಯದ ಕೊರತೆಯಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಮಾಹಿತಿ ದೆಹಲಿ ವರಿಷ್ಠರಿಗೂ ತಲುಪಿದೆ.

ರಾಜ್ಯದಲ್ಲಿ ಇತ್ತೀಚಿಗೆ ನಡೆದ ಸ್ಥಳೀಯ ಸಂಸ್ಥೆ ಹಾಗೂ ಉಪಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿದೆ. ಇದೇ ರೀತಿ ಮುಂದುವರೆದರೆ, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಹೀನಾಯ ಸೋಲು ಅನುಭವಿಸಬೇಕಾಗುತ್ತದೆ.

ಉಳಿದ ಅವಧಿಯಲ್ಲಿಯಾದರೂ, ಉತ್ತಮ ಆಡಳಿತ ನೀಡಿ, ಪಕ್ಷವನ್ನು ಸಂಘಟಿಸಬೇಕೆಂಬ ಉದ್ದೇಶದಿಂದ ವರಿಷ್ಠರು ನಾಯಕತ್ವ ಬದಲಾವಣೆಗೆ ಮುಂದಾಗಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿಯವರ ಬದಲಾವಣೆ ಯಾದರೆ ಪರ್ಯಾಯ ನಾಯಕ ಯಾರು ಎಂಬ ಬಗ್ಗೆಯು ವರಿಷ್ಠರಲ್ಲಿ ಚರ್ಚೆ ನಡೆದಿದೆ. ಅಷ್ಟೇ ಅಲ್ಲ ಕೆಲವು ಆಯ್ದ ಹೆಸರುಗಳನ್ನು ಪಟ್ಟಿ ಮಾಡಿ ಇಟ್ಟುಕೊಂಡಿದ್ದಾರೆ ಎನ್ನಲಾಗಿದೆ.

ಜಾರ್ಖಂಡ್ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಸಮಯದಲ್ಲಿ ಪಕ್ಷದ ವರಿಷ್ಠರು ಅಲ್ಲಿನ ಮುಖ್ಯಮಂತ್ರಿಯವರನ್ನು ದೆಹಲಿಗೆ ಕರೆಸಿಕೊಂಡಿದ್ದರು. ಇದೀಗ ವರಿಷ್ಠರ ಮಾತಿಗೆ ಯಡಿಯೂರಪ್ಪನವರು ಮನ್ನಣೆ ನೀಡುತ್ತಾರೋ ಅಥವಾ ವರಿಷ್ಠರ ವಿರುದ್ಧವೇ ತಿರುಗಿ ಬೀಳುತ್ತಾರೋ ಕಾದು ನೋಡಬೇಕಾಗಿದೆ.

ಬೊಮ್ಮಾಯಿ ಮತ್ತು ವಿಜಯೇಂದ್ರ ದೆಹಲಿಗೆ ಹೋದ ಸಂದರ್ಭದಲ್ಲೂ ಯಡಿಯೂರಪ್ಪ ನವರನ್ನು ಮೊದಲು ನಾಯಕತ್ವದಿಂದ ಕೆಳಗೆ ಇಳಿಯುವಂತೆ ಸೂಚಿಸಿದ್ದರು ಎನ್ನಲಾಗಿದೆ. ಉಳಿದ ವಿಷಯದ ಬಗ್ಗೆ ನಂತರ ಚರ್ಚೆ ಮಾಡೋಣ ಎಂದು ಪಕ್ಷದ ವರಿಷ್ಠರು ತಿಳಿಸಿದ್ದಾರೆ ಎನ್ನಲಾಗುತ್ತಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ರಾಜ್ಯದಲ್ಲಿ ನಾಯಕತ್ವ ಬದಲಾಗುತ್ತದೆ ಎಂಬುದು ಹಸಿ ಸುಳ್ಳು. ಇವೆಲ್ಲ ಸತ್ಯಕ್ಕೆ ದೂರವಾದ ಸಂಗತಿ ಎಂದು ಸ್ಪಷ್ಟಪಡಿಸಿದ್ದಾರೆ.

ನಾವು ಮತ್ತು ಯಡಿಯೂರಪ್ಪ ಪುತ್ರ ವಿಜಯೇಂದ್ರ ದೆಹಲಿಗೆ ತೆರಳಿದ್ದರ ಹಿಂದೆ ಯಾವುದೇ ರಾಜಕೀಯ ಉದ್ದೇಶವಿಲ್ಲ. ಹಸಿ ಸುಳ್ಳುಗಳನ್ನು ನಂಬಬೇಡಿ. ಸೋಂಕು ನಿವಾರಣೆಗಾಗಿ ಕೇಂದ್ರದ ಸಹಕಾರ ಕೋರಲು ನಾವು ದೆಹಲಿಗೆ ತೆರಳಿದ್ದವೇ ಹೊರತು ಬೇರೆ ಯಾವುದೇ ಉದ್ದೇಶವಿಲ್ಲ ಎಂದರು.

ಪದೇ ಪದೇ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡದೇ ಗೃಹ ಸಚಿವರು ಜಾರಿಕೊಂಡರು.

## ಸೋಂಕಿನಲ್ಲಿ ಪ್ರಥಮ

**(1ನೇ ಪುಟದಿಂದ)** ಸಕ್ರಿಯ ಸೋಂಕಿತರಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಸೋಮವಾರ 16,747 ಸೋಂಕಿತರು ಕಂಡು ಬಂದಿದ್ದಾರೆ. ಭಾನುವಾರಕ್ಕೆ ಹೋಲಿಸಿದರೆ ಸೋಂಕು ಪ್ರಮಾಣ 4 ಸಾವಿರದಷ್ಟು ಕಡಿಮೆಯಾಗಿದೆ. ಆದರೆ, ಒಂದೇ ದಿನ 374 ಸಾವುಗಳು ಸಂಭವಿಸಿರುವುದು ಕಳವಳಕಾರಿಯಾಗಿದೆ. ನಗರದಲ್ಲಿ ಇದುವರೆಗೂ 8,431 ಕೊರೊನಾ ಸಾವುಗಳು ಸಂಭವಿಸಿವೆ.

ಬೆಂಗಳೂರು ನಂತರ ಬಳ್ಳಾರಿ ಯಲ್ಲಿ ಅತಿ ಹೆಚ್ಚಿನ 26 ಸಾವುಗಳು ಸಂಭವಿಸಿವೆ. ಸೋಮವಾರ ನಗರದಲ್ಲಿ 973 ಸೋಂಕಿತರು ಕಂಡುಬಂದಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ತುಮಕೂರಿನಲ್ಲಿ 2,168, ಹಾಸನದಲ್ಲಿ 1,800, ಮೈಸೂರಿನಲ್ಲಿ 1,537, ದಕ್ಷಿಣ ಕನ್ನಡದಲ್ಲಿ 1,175, ಮಂಡ್ಯದಲ್ಲಿ 1,133 ಹಾಗೂ ಧಾರವಾಡದಲ್ಲಿ 1,006 ಸೋಂಕಿತರು ಕಂಡು ಬಂದಿದ್ದಾರೆ.

# 'ಲಾಕ್‌ಡೌನ್' ಜನರನ್ನು ದನಕ್ಕೆ ಬಡಿದಂತೆ ಬಡಿಯುವುದಾ?



ಬೆಂಗಳೂರು, ಮೇ 10 - ಜನಸಂಚಾರ ತಡೆಯುವುದೇ ಲಾಕ್‌ಡೌನ್ ಎಂದು ಭಾವಿಸಿರುವ ರಾಜ್ಯ ಸರ್ಕಾರ ಸಂಕಷ್ಟದಲ್ಲಿರುವ ನಾಗರಿಕರನ್ನು ಮರೆತಿರುವುದು ದುರಂತ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಜನ ಹೊರಗೆ ಬಂದರೆ ದನಕ್ಕೆ ಬಡಿದಂತೆ ಬಡಿಯುವುದಾ ಲಾಕ್‌ಡೌನ್? ಎಂದು ಪ್ರಶ್ನಿಸಿದ್ದಾರೆ.

ಲಾಕ್ ಡೌನ್ ಮಾಡಿ ಜನರ ಜೀವ ಉಳಿಸಿ ಎಂದು ನಾನು ಮೊದಲೇ ಹೇಳಿದ್ದೆ. ಹಾಗೆ ಹೇಳುವಾಗ ಲಾಕ್ ಡೌನ್ ನಿಂದ ಜನ ಜೀವನಕ್ಕೆ ಆಗುವ ತೊಂದರೆಗಳಿಗೆ ಪರಿಹಾರ ಕ್ರಮಗಳಿರಬೇಕು, ಜನರ ಅಗತ್ಯವನ್ನು ಸರ್ಕಾರ ಭರಿಸಬೇಕೆಂದು ಹೇಳಿದ್ದೆ. ಆದರೆ, ಲಾಕ್ ಡೌನ್ ಸಂದರ್ಭದಲ್ಲಿ ನೀಡಬೇಕಾದ ಪರಿಹಾರ ಕ್ರಮಗಳಿಂದ ವಿಮುಖವಾಗಿರುವ ಸರ್ಕಾರ, ಬೇಜವಾಬ್ದಾರಿತನ ತೋರಿದೆ ಎಂದವರು ಹೇಳಿದ್ದಾರೆ.

ಜನರಿಗೆ ಎಲ್ಲಿ ಪರಿಹಾರ ನೀಡಬೇಕಾಗುತ್ತದೆಯೋ, ಜೀವನ ನಿರ್ವಹಣೆಗೆ ನೆರವು ನೀಡಬೇಕಾಗಿ ಬರುತ್ತದೆಯೋ ಎಂಬ ದುರಾಲೋಚನೆ ಮಾಡಿರುವ ಸರ್ಕಾರ ಲಾಕ್ ಡೌನ್ ಎಂಬ ಪದವನ್ನು ಧೈರ್ಯದಿಂದ ಹೇಳುತ್ತಲೇ ಇಲ್ಲ. ಕಠಿಣ ನಿಯಮ ಎಂದು ಹೇಳಿ ಲಾಕ್ ಡೌನ್ ನಿಂದ ದೂರ ನಿಂತಿದೆ. ಕೇಂದ್ರವೂ ಇದೇ ಕುತಂತ್ರದ ನಡೆಯನ್ನು ಅನುಸರಿಸಿ ಜವಾಬ್ದಾರಿಯಿಂದ ನುಣುಚಿಕೊಂಡಿದೆ ಎಂದವರು ತರಾಟೆಗೆ ತೆಗೆದುಕೊಂಡರು.

## ಪರಿಹಾರ ನೀಡದ ಸರ್ಕಾರ ಬೇಜವಾಬ್ದಾರಿತನ ತೋರಿದೆ

ಲಾಕ್ ಡೌನ್ ಎಂದರೆ ಜನ ಹೊರೆ ಹೋಗಲಾಗದ ಪರಿಸ್ಥಿತಿ. ಬದುಕಿನ ಅಗತ್ಯವನ್ನು ದುಡಿದುಕೊಳ್ಳಲಾಗದ ದುಸ್ಥಿತಿ. ಸರ್ಕಾರವೇ ಇದರ ಹೊಣೆಗಾರ, ಅದಕ್ಕೆ ಸರ್ಕಾರವೇ ಪರಿಹಾರ ನೀಡಬೇಕು ಎಂಬುದೂ ನನ್ನ ನಿಲುವು, ಸಲಹೆ. ಸರ್ಕಾರ ಸಂಪೂರ್ಣ ಲಾಕ್ ಡೌನ್ ಘೋಷಿಸಬೇಕಿತ್ತು ಮತ್ತು ಪರಿಹಾರ ನೀಡಬೇಕಿತ್ತು. ಆದರೆ ಈವರೆಗೆ ಪರಿಹಾರ ಪ್ಯಾಕೇಜ್ ನ ಮಾತೇ ಇಲ್ಲ.

ಮಹಾರಾಷ್ಟ್ರ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಕೇಂದ್ರ ಸರ್ಕಾರಕ್ಕೆ ಕಾಯದೇ ಲಾಕ್ ಡೌನ್ ಮಾಡಿವೆ. ಜನರಿಗೆ ಆಹಾರ ಸೇರಿದಂತೆ ಪರಿಹಾರ ಘೋಷಿಸಿವೆ. ಆಂಧ್ರದಲ್ಲಿ ಸೋಂಕಿತರಿಗೆ ಉಚಿತ ಚಿಕಿತ್ಸೆ ಸಿಗುತ್ತಿದೆ. ಇದು ಸರ್ಕಾರಗಳ ಜವಾಬ್ದಾರಿಯುತ ನಡೆ. ಆದರೆ, ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕೇಂದ್ರದ ದುರ್ನಡೆಯನ್ನು ರಾಜ್ಯ ಅನುಸರಿಸಬಾರದು. ಜನರ ಆರೋಗ್ಯ ಎಷ್ಟು ಮುಖ್ಯವೋ ಜನರ ಬದುಕೂ ಅಷ್ಟೇ ಮುಖ್ಯವಾಗಬೇಕು ಎಂದವರು ಹೇಳಿದ್ದಾರೆ.

# ಅನಗತ್ಯ ಓಡಾಡಕ್ಕೆ ಬ್ರೇಕ್

**(1ನೇ ಪುಟದಿಂದ)** ಕಾರಾಗೃಹ ಶಿಕ್ಷೆ ಆಗಲೂಬಹುದು. ಈ ನಿಟ್ಟಿನಲ್ಲಿ ಸಾರ್ವಜನಿಕರು ಅನಗತ್ಯವಾಗಿ ರಸ್ತೆಗೆ ಇಳಿಯದೆ ಸರ್ಕಾರದ ನಿಯಮಗಳನ್ನು ಪಾಲಿಸಬೇಕು. ಸೋಮವಾರ ಕೆಲ ಕಾಲ ಸಡಿಲ ಕೊಡಲಾಗಿದೆ. ಮಂಗಳವಾರದಿಂದ ಯಾವುದೇ ಸಡಿಲತೆ ಇಲ್ಲ. ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ಬಿ.ಎನ್. ಗಿರೀಶ್ ಎಚ್ಚರಿಕೆ ನೀಡಿದರು.

ರೋಗಿಗಳ ಪರವಾಗಿ ಕೇವಲ ಒಬ್ಬರು ಮಾತ್ರ ಅಟೆಂಡರ್ ಓಡಾಡಬೇಕು. ಆಸ್ಪತ್ರೆ ಹೆಸರು ಹೇಳಿಕೊಂಡು ಅನಗತ್ಯವಾಗಿ ಓಡಾಡುವ ವ್ಯಕ್ತಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೇಕ್ರಮಕೈಗೊಳ್ಳಲಾಗುವುದು. ಅಗತ್ಯ ಸೇವೆಗಳು ಎಂದು ಸುಮ್ಮನೆ ದ್ವಿಚಕ್ರವಾಹನ, ವಿವಿಧ ವಾಹನಗಳ ಮೇಲೆ ನಾಮಫಲಕ ಹಾಕಿಕೊಂಡು ಓಡಾಡುತ್ತಿದ್ದಾರೆ. ಇಂತಹವರ ವಿರುದ್ದ ಮಾತ್ರವಲ್ಲದೇ ಆಸ್ಪತ್ರೆ ಹಳೇ ಚೀಟಿಗಳು, ಮೆಡಿಕಲ್ ಸ್ಲಿಪ್ ಇಟ್ಟುಕೊಂಡು, ವಿಮಾ ಪಾಲಿಸಿ ಕಟ್ಟಲು, ತರಕಾರಿ, ದಿನಸಿ ತರುವುದಾಗಿ ಸುಮ್ಮನೇ ಓಡಾಡುತ್ತಿದ್ದಾರೆ. ಇದು ಸರಿಯಲ್ಲ. ಸಾರ್ವಜನಿಕರು ವಿನಾಕಾರಣ ಹೊರಗೆ ಬಂದು, ಸೋಂಕು ಹಚ್ಚಿಕೊಂಡು ಕುಟುಂಬಕ್ಕೆ ಹಚ್ಚದೆ ಮನೆಯಲ್ಲೇ ಇರಬೇಕು. ಮೊದಲನೇ ದಿನವಾದ್ದರಿಂದ ಸ್ವಲ್ಪ ಸಡಿಲಗೊಳಿಸಿದ್ದೇವೆ. ಮಂಗಳವಾರದಿಂದ ಕಠಿಣವಾಗಿ ನಿಯಮಗಳು ಜಾರಿಗೆ ಬರುತ್ತವೆ ಎಂದು ತಿಳಿಸಿದರು.

ಅನಾವಶ್ಯಕವಾಗಿ ಜನರು ಆನ್‌ಕೋವಿಡ್ ಡ್ಯೂಟಿ ಎಂದು ಹಾಕಿಕೊಂಡರೆ ಕೇಸು ಶತಸಿದ್ದ. ಆಸ್ಪತ್ರೆಗೆ ತೆರಳುವ ರೋಗಿಗಳ ಯೋಗಕ್ಷೇಮ ವಿಚಾರಿಸಲು ಒಬ್ಬ ವ್ಯಕ್ತಿಗೆ ಪಾಸ್ ನೀಡಲಾಗುತ್ತದೆ. ಲಸಿಕೆ ಹಾಕಿಸಿಕೊಳ್ಳುವವರಿಗೆ, ವೈದ್ಯಕೀಯ ತುರ್ತು ಇರುವವರಿಗೆ, ಕೃಷಿಗಾಗಿ ಹೋಗುವುದಾದರೆ ಯಾವುದೇ ತಪ್ಪಿಲ್ಲ. ಅಂತಹವರನ್ನು ತಡೆಯದೇ ಇರಲು ಪೊಲೀಸರಿಗೆ ಸೂಚಿಸಲಾಗಿದೆ ಎಂದರು.

ಕೊರೊನಾದಿಂದ ಎಷ್ಟು ಜನ ಸಾಯುತ್ತಿದ್ದಾರೆ ಎನ್ನುವ ಬಗ್ಗೆ ಚಿಂತಿಸಿ, ರೋಗ ಬಂದರೆ ನೀವೂ ಸಾಯುತ್ತೀರಿ, ನಿಮ್ಮ ಕುಟುಂಬ, ಮಕ್ಕಳ ಬಗ್ಗೆ ಯೋಚಿಸಿ. ಮನೆಯಿಂದ ಹೊರಗಡೆ ಬರುವ ಮುನ್ನ ನೂರು ಬಾರಿ ಯೋಚನೆ ಮಾಡಿ ಹೊರಗೆ ಬನ್ನಿ. ರೋಗದ ಗಂಭೀರತೆ ಅರಿತು ಹೊರಗೆ ಬರಬೇಕೋ, ಬೇಡವೋ ಎನ್ನುವುದನ್ನು ಅರಿತು ಹೊರಗೆ ಬನ್ನಿ ಎಂದು ಕಿವಿಮಾತು ಹೇಳಿದರು.

ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ವಿನಾಕಾರಣ ಜನರು ನಗರದಲ್ಲಿ ಓಡಾಟ ನಡೆಸುತ್ತಿದ್ದು, ಆಸ್ಪತ್ರೆಗಳಿಗೆ ಹೋಗುತ್ತಿದ್ದೇವೆ. ಲಸಿಕೆ ಹಾಕಿಸಿಕೊಳ್ಳಲು ಓಡಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇನ್ನು ಸಾಕಷ್ಟು ಜನಕ್ಕೆ ಲಾಕ್‌ಡೌನ್ ಬಗ್ಗೆ ಗಂಭೀರತೆ ಬಂದಿಲ್ಲ. ಮಂಗಳವಾರದಿಂದ ಈ ನಿಯಮ ಮತ್ತಷ್ಟು ಬಿಗಿಯಾಗಲಿದೆ. ನಗರದಿಂದ ಹೊರಗೆ ಇರುವ ಕೆಲವು ಬಡಾವಣೆಗಳಲ್ಲಿ ಜನರ ಓಡಾಟ ಕಂಡು ಬರುತ್ತಿದೆ. ಮಂಗಳವಾರದಿಂದ ನಗರ ಪಾಲಿಕೆಯಿಂದ ಗಸ್ತು ಮಾಡುವ ಮೂಲಕ ಧ್ವನಿವರ್ಧಕದ ಮೂಲಕ ಸಾರ್ವಜನಿಕರು ಮನೆಯಿಂದ ಹೊರಗೆ ಬಾರದಂತೆ ತಿಳುವಳಿಕೆ ನೀಡಲಾಗುವುದು ಎಂದು ಹೇಳಿದರು.

ಈ ವೇಳೆ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಬಡಾವಣೆ ಠಾಣೆಯ ಪಿಎಸ್‌ಐ ಅರವಿಂದ್, ಸಿಬ್ಬಂದಿಗಳಾದ ಹರೀಶ್ ರೆಡ್ಡಿ, ಸಿದ್ದೇಶ್, ಕಂದಾಯ ಇಲಾಖೆಯ ಶಿವ ಕುಮಾರ್, ಅಂಜಿನಪ್ಪ, ಅರುಣ್‌ಕುಮಾರ್ ಇತರರು ಕಾರ್ಯಾಚರಣೆಯಲ್ಲಿ ಇದ್ದರು.

### ತಹಶೀಲ್ದಾರ್-ಮೇಯರ್-ಪೊಲೀಸ್ ಅಧಿಕಾರಿಗಳ ಕಾರ್ಯಾಚರಣೆ

## ಕುಂಟು ನೆಪ ಹೇಳ್ಕೊಂಡು ರಸ್ತೆಗಿಳಿದರೆ ಜಾಮೀನು ರಹಿತ ಬಂಧನ-ಜೈಲು: ಎಚ್ಚರಿಕೆ

### 5 ರಿಂದ 10 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ

ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯಿದೆ ಅಡಿಯಲ್ಲಿ ಒಂದು ಬಾರಿ ಪ್ರಕರಣ ದಾಖಲಾದರೆ ಜಾಮೀನು ರಹಿತ ಬಂಧನದ ಪ್ರಕರಣ ದಾಖಲಾಗುತ್ತದೆ. ಇಂತಿಷ್ಟೇ ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇರಬೇಕೆನ್ನುವ ನಿಯಮ ಇಲ್ಲ. ಅವರು ಮಾಡುವ ಅಪರಾಧ ಗಳ ಮೇಲೆ ಆಧರಿಸುತ್ತದೆ. ಕೆಲವರು ಅವರ ಕಚೇರಿಯ ಗುರುತಿನ ಚೀಟಿಗಳನ್ನು ದುರುಪ ಯೋಗ ಮಾಡಿಕೊಳ್ಳುತ್ತಾರೆ. ಒಂದು ವೇಳೆ ಇಂತಹ ಪ್ರಕರಣಗಳು ದೃಢಪಟ್ಟರೆ 5ರಿಂದ 10 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಗುವುದು. ಈ ವಿಚಾರದಲ್ಲಿ ಸಮಯವನ್ನು ದುರು ಪಯೋಗ ಮಾಡಿಕೊಂಡರೆ ಪೊಲೀಸರ ಮುಖಾಂತರ ಪ್ರಕರಣ ದಾಖಲು ಮಾಡಿಕೊಂಡು ನ್ಯಾಯಾಂಗ ಬಂಧನಕ್ಕೆ ನೀಡುತ್ತಾರೆ. ಪ್ರಕರಣವು ವಿಚಾರಣೆ ನಡೆದು ಸಿವಿಲ್ ಕೋರ್ಟ್‌ನಲ್ಲಾಗಲೀ, ಹೈಕೋರ್ಟ್‌ನಲ್ಲಾಗಲೀ ಶಿಕ್ಷೆ ವಿಧಿಸುವ ಅಧಿಕಾರ ಆಯಾ ನ್ಯಾಯಮೂರ್ತಿಗಳ ಮೇಲೆ ಇರುತ್ತದೆ.

- ಬಿ.ಎನ್ .ಗಿರೀಶ್, ತಾಲ್ಲೂಕು ದಂಡಾಧಿಕಾರಿ.

## ಮುಂಗಟ್ಟುಗಳು ಬಂದ್-ತಪ್ಪದ ವಾಹನಗಳ ಓಡಾಟ

**(1ನೇ ಪುಟದಿಂದ)** ಓಡಾಟಕ್ಕೆ ಅವಕಾಶ ಮಾಡಿ ಕೊಟ್ಟು ಉಳಿದೆಲ್ಲಾ ಕಡೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಅನಾವಶ್ಯಕ ಓಡಾಟಕ್ಕೆ ಬ್ರೇಕ್ ಹಾಕಲು ಪ್ರಯತ್ನಿಸಲಾಗಿತ್ತು. ಪ್ರತಿ ವೃತ್ತಗಳಲ್ಲಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರು. ಅನಾವಶ್ಯಕವಾಗಿ ರಸ್ತೆಗಿಳಿದ ವಾಹನ ಸವಾರರು ಪಕ್ಕದ ರಸ್ತೆ, ಇನ್ನಿತರೇ ರಸ್ತೆಗಳಿಂದ ಸುತ್ತಿಕೊಂಡು ಮುಖ್ಯ ರಸ್ತೆಗೆ ಆಗಮಿಸಿ ಓಡಾಟ ಮಾಡಿದರು. ಇದು ಅವಶ್ಯಕ ಮತ್ತು ತುರ್ತು ಓಡಾಟಕ್ಕೆ ತೊಂದರೆಯುಂಟಾಗಿತ್ತು.

ಅಗತ್ಯ ಸೇವೆಗಳ ಹೆಸರಲ್ಲಿ ಜನರು ಅನಗತ್ಯ ವಾಗಿ ರಸ್ತೆಗೆ ಬರುತ್ತಿದ್ದರು. ಈ ಹಿಂದೆ ನೀಡಲಾಗಿದ್ದ ಪಾಸ್ ಗಳನ್ನೇ ಹಿಡಿದು ಅಡ್ಡಾಡುತ್ತಿದ್ದ ಪ್ರಸಂಗಗಳು ಕಂಡು ಬಂದವು. ಅನಾವಶ್ಯಕವಾಗಿ ಓಡಾಟ ಮಾಡುವ ಜನರನ್ನು ಪೊಲೀಸರು ವಿಚಾರಣೆ ನಡೆಸಿ, ಅವರ ವಾಹನಗಳನ್ನು ವಶಪಡಿಸಿಕೊಂಡರು. ಅನಾವಶ್ಯಕವಾಗಿ ರಸ್ತೆಗಿಳಿದ 259 ವಾಹನಗಳನ್ನು ವಶಕ್ಕೆ ಪಡೆದ ಪೊಲೀಸರು, ಅವುಗಳನ್ನು ಪೊಲೀಸ್ ಕವಾಯತ್ತು ಮೈದಾನದಲ್ಲಿ ನಿಲ್ಲಿಸಿದರು. ಮಾಸ್ಕ್ ಧರಿಸದೇ ಓಡಾಡಿದ 591 ಪ್ರಕರಣಗಳ ದಾಖಲಿಸಿ 78, 600 ರೂ. ದಂಡ ವಸೂಲಿ ಮಾಡಲಾಗಿದೆ.

**ಕೈ ಮುಗಿದ ಖಾಕಿ:** ಲಾಕ್‌ಡೌನ್ ಇದ್ದರೂ ಅನಗತ್ಯವಾಗಿ ರಸ್ತೆಗಿಳಿದ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದರಲ್ಲದೇ, ಹೊರಗೆ ಬರಬೇಡಿ ಎಂದು ಕೊನೆಗೆ ಕೈ ಮುಗಿದ ಘಟನೆ ನಗರದ ಸಂಗೊಳ್ಳಿ ರಾಯಣ್ಣ ರಸ್ತೆ ಬಳಿ ನಡೆದಿದೆ.

ಕೊರೊನಾ ಸೋಂಕು ಹೆಚ್ಚಾಗುತ್ತಿದೆ. ಸಾಮಾಜಿಕ ಜವಾಬ್ದಾರಿ ಮರೆಯಬೇಡಿ. ಅನಗತ್ಯ ಓಡಾಟ ಬೇಡ. ದಯವಿಟ್ಟು ನಾನು ನಿಮಗೆ ಕೈ ಮುಗಿಯುತ್ತೇನೆ. ಯಾರೂ ಕೂಡ ಹೊರಗೆ ಓಡಾಡಬೇಡಿ. ನಾವು ಎಷ್ಟಂತ ಹೊಡೆಯಬೇಕು, ಎಷ್ಟಂತ ವಾಹನ ಸೀಜ್ ಮಾಡಬೇಕು ಎಂದು ಪಿಎಸ್‌ಐ ಅರವಿಂದ್ ಕೈ ಮುಗಿದು ಬೇಡಿದರು.

## ಮಲೇಬೆನ್ನೂರು : ಕಟ್ಟುನಿಟ್ಟಿನ ಲಾಕ್‌ಡೌನ್



ಮಲೇಬೆನ್ನೂರು, ಮೇ 10- ನಿಯಂತ್ರಣ ಮೀರಿ ಹರಡುತ್ತಿರುವ ಕೊರೊನಾಕ್ಕೆ ಕಡಿವಾಣ ಹಾಕುವ ಮತ್ತು ಸೋಂಕಿನ ಸರಪಳಿಯನ್ನು ಕತ್ತರಿಸುವ ಉದ್ದೇಶದಿಂದ ಜಾರಿಗೊಳಿಸಿರುವ ಕಠಿಣ ಲಾಕ್‌ಡೌನ್‌ಗೆ ಮಲೇಬೆನ್ನೂರು ಸ್ತಬ್ಧವಾಗಿತ್ತು. ಕಠಿಣ ನಿರ್ಬಂಧಗಳ ಮೂಲಕ ಜನರ ಓಡಾಟವನ್ನು ನಿಯಂತ್ರಿಸಲು ಪೊಲೀಸರು ಹಾಗೂ ಪುರಸಭೆಯವರು ಪಟ್ಟಣದಲ್ಲಿ ಕೆಲವು ಸಂಪರ್ಕ ರಸ್ತೆಗಳನ್ನು ಬಂದ್ ಮಾಡಿ, ಸಿಬ್ಬಂದಿ ನಿಯೋಜನೆ ಮಾಡಿ, ಅನಿವಾರ್ಯ ಓಡಾಟಕ್ಕೆ ಮಾತ್ರ ಅವಕಾಶ ಮಾಡಿದ್ದಾರೆ.

ಬೆಳಿಗ್ಗೆ ನಿಯಮ ಉಲ್ಲಂಘನೆ ಮಾಡಿ ಸಂಚರಿಸುತ್ತಿದ್ದ 40 ಜನರ ಬೈಕ್‌ಗಳನ್ನು ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಅವರ ನೇತೃತ್ವದಲ್ಲಿ ಪಿಎಸ್‌ಐ ವೀರಬಸಪ್ಪ ಕುಸಲಾಪುರ ಹಾಗೂ ಪೊಲೀಸ್ ಸಿಬ್ಬಂದಿಗಳು ಸೀಜ್ ಮಾಡಿದರು.

ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ದಿನಕರ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಸದಸ್ಯರಾದ ಎ. ಆರೀಫ್ ಅಲಿ, ಮಹಾಂತೇಶ್ ಸ್ವಾಮಿ, ಪಾನಿಪೂರಿ ರಂಗನಾಥ್, ಪುರಸಭೆ ಅಧಿಕಾರಿಗಳಾದ ಉಮೇಶ್, ಪ್ರಭು, ಗುರುಪ್ರಸಾದ್ ಮತ್ತಿತರರು ಈ ವೇಳೆ ಹಾಜರಿದ್ದರು

## ಬೇಡಿಕೆ ಏರಿಕೆ : ಸಾಲುಗಟ್ಟಿ ನಿಂತ ವಾಹನಗಳು




**(1ನೇ ಪುಟದಿಂದ)** ರೇಣುಕಾ ಗ್ಯಾಸ್ ವಿತರಣಾ ಕೇಂದ್ರವು ಚಾಲನೆಯಲ್ಲಿ ಇರದ ಕಾರಣ ಸದರನ್‌ಗೆ ಬೇಡಿಕೆಯ ಪ್ರಮಾಣ ಇನ್ನೂ ಹೆಚ್ಚಾಗಿದೆ. ಆಕ್ಸಿಜನ್ ಕೊರತೆ ಬರದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಳ್ಳಾರಿ ಜಿಂದಾಲ್ ಕಂಪನಿಯಿಂದ ಆಕ್ಸಿಜನ್ ತಲುಪಲು ಸಮಯವಾಗಲಿದೆ ಎಂಬುವುದನ್ನು ಬಿಟ್ಟರೆ, ಉಳಿದೆಲ್ಲವೂ ಸರಿಯಾಗಿ ನಡೆಯುತ್ತಿದೆ ಎಂದು ಪ್ರೊಬೇಷನರಿ ಉಪವಿಭಾಗಧಿಕಾರಿ ವೀರೇಶ್ ಹೇಳಿದ್ದಾರೆ.

ದಾವಣಗೆರೆ ಜಿಲ್ಲೆಯ ಅಗತ್ಯತೆಗೆ ತಕ್ಕಂತೆ ಜಿಂದಾಲ್‌ನಿಂದ ಆಕ್ಸಿಜನ್ ಸರಬರಾಜು ಮಾಡುತ್ತಿದ್ದಾರೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ಎಸ್ಪಿ ಹನುಮತರಾಯ ಅವರ ಸೂಚನೆಯಂತೆ ರೋಗಿಗಳಿಗೆ ಆಕ್ಸಿಜನ್ ಕೊರತೆ ಬರದಂತೆ ನೋಡಿಕೊಳ್ಳಲು ನಾವೇ ಖುದ್ದಾಗಿ ಆಕ್ಸಿಜನ್ ಸರಬರಾಜು ಮಾಡುವ ವಾಹನಗಳನ್ನು ಆಸ್ಪತ್ರೆಯ ಆವರಣಕ್ಕೆ ಬಿಟ್ಟು ಬರುತ್ತಿರುವುದಾಗಿ ಸಿಪಿಐ ಸತೀಶ್ ಕುಮಾರ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಗುತ್ತೂರು ಪೊಲೀಸ್ ಠಾಣೆಯ ಪಿಎಸ್‌ಐ ಡಿ. ರವಿಕುಮಾರ್, ಸದರನ್ ಗ್ಯಾಸ್ ಏಜೆನ್ಸಿ ಮ್ಯಾನೇಜರ್ ಎ. ನಾಗರಾಜ್, ಇಂಜಿನಿಯರ್ ಮಧುಕೇಶವ, ಪೊಲೀಸ್ ಸಿಬ್ಬಂದಿಗಳಾದ ಲಿಂಗರಾಜ್, ಕರಿಯಪ್ಪ, ಕಂದಾಯ ಇಲಾಖೆಯ ಕಿರಣ್, ಇನ್ನಿತರರು ಹಾಜರಿದ್ದರು.

## ಸ್ವಯಂ ಪ್ರೇರಿತರಾಗಿ ಅಂಗಡಿ ಮುಂಗಟ್ಟು ಬಂದ್



**ಹರಿಹರ**

ಹರಿಹರ, ಮೇ 10- ರಾಜ್ಯ ಸರ್ಕಾರ ಕೊರೊನಾ ರೋಗವನ್ನು ಹತೋಟಿಗೆ ತರುವುದಕ್ಕೆ ಲಾಕ್‌ಡೌನ್ ಘೋಷಣೆ ಮಾಡಿದ್ದರಿಂದಾಗಿ ನಗರದ ವ್ಯಾಪಾರಸ್ಥರು ಸ್ವಯಂ ಪ್ರೇರಿತರಾಗಿ ತಮ್ಮ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿದರು.

ನಗರದ ಜನನಿಬಿಡ ರಸ್ತೆಗಳು ಸಾರ್ವಜನಿಕರ ಓಡಾಟವಿಲ್ಲದೆ, ಬಿಕೋ ಎನ್ನುತ್ತಿದ್ದವು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮತ್ತು ಸಿಪಿಐ ಸತೀಶ್ ಕುಮಾರ್, ಹಾಗೂ ನಗರ ಠಾಣೆಯ ಪಿಎಸ್‌ಐ ಸುನಿಲ್ ಬಸವರಾಜ್ ತೆಲಿ ಅವರುಗಳು ಅಲೆಮಾರಿ ಜನಾಂಗದವರ ಕುಟುಂಬಕ್ಕೆ ರೇಷನ್ ಕಿಟ್ ವಿತರಣೆ ಮಾಡಿದರು.

## ತೇಲಿದ ಮೃತದೇಹಗಳು

**(1ನೇ ಪುಟದಿಂದ)** ವರದಿ ಎಂದು ಚೌಸಾದ ಬಿ.ಡಿ.ಒ. ಅಶೋಕ್ ಕುಮಾರ್ ಹೇಳಿದ್ದಾರೆ.

ಕೊರೊನಾದಿಂದ ಮೃತರ ಅಂತ್ಯಕ್ರಿಯೆಗಾಗಿ ಹಣ ವಸೂಲಿ ದಂಧೆಯೇ ನಡೆಯುತ್ತಿದೆ ಎಂಬ ಆರೋಪಗಳು ಕೇಳಿ ಬರುತ್ತಿದೆ.

ಅಂತ್ಯಕ್ರಿಯೆಗೆ ಕಟ್ಟಿಗೆಯ ಕೊರತೆಯಾಗಿದೆ. ಲಾಕ್‌ಡೌನ್ ಕಾರಣದಿಂದಾಗಿ ಸರಕುಗಳು ಸಿಗುವುದೂ ಕಷ್ಟವಾಗಿದೆ. ಹೀಗಾಗಿ ಕೆಲ ಕುಟುಂಬಗಳು ಅಗಲಿದವರನ್ನು ನದಿಗೆ ಬಿಡುತ್ತಿದ್ದಾರೆ ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದ್ದಾರೆ.

ಕೊರೊನಾ ಶಿಷ್ಟಾಚಾರದ ಹೆಸರಿನಲ್ಲಿ ಅಧಿಕಾರಿಗಳು ತಾವೇ ಅಂತ್ಯಕ್ರಿಯೆ ನಡೆಸುವುದಾಗಿ ಮೃತರ ಕುಟುಂಬದವರಿಗೆ ತಿಳಿಸಿರುತ್ತಾರೆ. ನಂತರ ನದಿಗಳಲ್ಲಿ ಎಸೆದು ಪರಾರಿಯಾದ ಘಟನೆಯೂ ನಡೆದಿರಬಹುದು ಎಂದು ಕೆಲವರು ಶಂಕಿಸುತ್ತಿದ್ದಾರೆ.

## ಪರೀಕ್ಷೆ ಮತ್ತು ಲಸಿಕೆ ಹಾಕಿಸಿಕೊಳ್ಳಲು ಮನವಿ

ದಾವಣಗೆರೆ, ಮೇ 10- ಕೋವಿಡ್ 19 ಸಾಂಕ್ರಾಮಿಕ ರೋಗ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಿಎಸ್‌ಆರ್ ಪಾರ್ಟನರ್ಸ್ ಇವರ ಸಹಯೋಗ ದೊಂದಿಗೆ ಅಲ್ಪಸಂಖ್ಯಾತ ಜನಾಂಗದವರು ಹೆಚ್ಚಾಗಿ ವಾಸಿಸುವ ಪ್ರದೇಶಗಳನ್ನು ಗುರುತಿಸಿ ಕೋವಿಡ್ ಪರೀಕ್ಷೆ, ಲಸಿಕೆ ಮಾಡಿಸಲು ನಿರ್ದೇಶನ ನೀಡಿದ್ದು, ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರು ಲಕ್ಷಣ ಗಳಿದ್ದಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು ಮತ್ತು ಲಸಿಕೆ ಹಾಕಿಸಿಕೊಂಡು ಎಲ್ಲರೂ ಸರ್ಕಾರದ ನಿಯಮಗಳನ್ನು ಪಾಲಿಸುವಂತೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.


## ರೆಮ್ಡಿಸಿವಿರ್ ಮಾಹಿತಿ

**(1ನೇ ಪುಟದಿಂದ)** ಇದರ ಜತೆಗೆ, ರಾಜ್ಯಾದ್ಯಂತ ಆಕ್ಸಿಜನ್ ಬೆಡ್‌ಗಳಿಗೆ ಭಾರೀ ಬೇಡಿಕೆ ಇದೆ. ಸರ್ಕಾರಿ ಆಸ್ಪತ್ರೆಗಳ ಜತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ಇರುವ ಸರ್ಕಾರದ ಬೆಡ್‌ಗಳ ಮಾಹಿತಿಯನ್ನು ಕೂಡ ಈ ಪೋರ್ಟಲ್‌ನಲ್ಲಿ ಹಾಕಲಾಗುವುದು. ಇದರಿಂದ ವ್ಯವಸ್ಥೆಯಲ್ಲಿ ಸಂಪೂರ್ಣ ಪಾರದರ್ಶಕತೆ ಬರುತ್ತದೆ. ಜತೆಗೆ ಸಾರ್ವಜನಿಕರಿಗೂ ವಾಸ್ತವ ಚಿತ್ರಣ ಸಿಗುವಂತಾಗಲಿದೆ ಎಂದರು.

## ಪೂರೈಕೆಗೆ ಒತ್ತಾಯ

**(1ನೇ ಪುಟದಿಂದ)** ಕ್ರಮ ತೆಗೆದುಕೊಂಡಿದೆ. ಅದರಂತೆ ದಾವಣಗೆರೆ ಜಿಲ್ಲೆಗೆ ಪ್ರತಿದಿನ 14 ಕೆ.ಎಲ್. ಆಕ್ಸಿಜನ್ ವಿತರಣೆಗೆ ಆದೇಶ ಹೊರಡಿಸಲಾಗಿದೆ. ಆದರೆ, ಜಿಲ್ಲೆಯಲ್ಲಿ ಪ್ರಸಕ್ತ 3,106 ಸಕ್ರಿಯ ಸೋಂಕಿತರಿದ್ದು, ಪ್ರತಿದಿನ 20 ಕೆ.ಎಲ್. ಆಕ್ಸಿಜನ್ ಅಗತ್ಯವಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಕೇಳಿದ್ದಾರೆ.

## ಗಂಭೀರತೆ ಅರಿತುಕೊಳ್ಳಲು ಮನವಿ



ದಾವಣಗೆರೆ, ಮೇ 10 - ಕೊರೊನಾ ಉಲ್ಬಣಗೊಂಡ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಲಾಕ್‌ಡೌನ್ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಜನರು ವಿನಾಕಾರಣ ರಸ್ತೆಗಿಳಿದಿದ್ದು, ನಿಯಮ ಉಲ್ಲಂಘಿಸುತ್ತಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಅರಿಯಬೇಕೆಂದು ಸಂಸದ ಜಿ.ಎಂ. ಸಿದ್ದೇಶ್ವರ ಮನವಿ ಮಾಡಿದ್ದಾರೆ. ಈ ರೀತಿ ವಿನಾಕಾರಣ ಅಡ್ಡಾಡುವುದರಿಂದ ತೀರಾ ಅವಶ್ಯಕತೆ ಇರುವವರಿಗೂ ತೊಂದರೆ ಉಂಟಾಗುತ್ತದೆ. ಆದ್ದರಿಂದ ಬೇಕಾಬಿಟ್ಟಿ ಓಡಾಡುವುದನ್ನು ತಪ್ಪಿಸಿ, ಪೊಲೀಸರು ವೈದ್ಯರೊಂದಿಗೆ ಸಹಕರಿಸುವಂತೆ ಕೋರಿದ್ದಾರೆ.

ಲಾಕ್‌ಡೌನ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಮನೆಯಲ್ಲೇ ಸುರಕ್ಷಿತವಾಗಿರಿ. ನೆರೆಹೊರೆಯವರನ್ನು ಸುರಕ್ಷಿತವಾಗಿರಲು ಬಿಡಿ. ಕೊರೊನಾ ರೋಗ ಲಕ್ಷಣಗಳು ಕಂಡು ಬಂದರೆ ತಕ್ಷಣ ವೈದ್ಯರ ಸಲಹೆ ಪಡೆದುಕೊಳ್ಳುವಂತೆ ಮನವಿ ಮಾಡಿದ್ದಾರೆ.

## ಹೆಚ್‌ಬಿಎಂ ಶೋಕ

ದಾವಣಗೆರೆ, ಮೇ 10- ಕಾರ್ಮಿಕ ಮತ್ತು ಶೋಷಿತ ವರ್ಗಗಳ ದನಿಯಾಗಿದ್ದ ಅವಿಶ್ರಾಂತ ಹೋರಾಟಗಾರ, ಸ್ನೇಹಶೀಲ ಹೆಚ್.ಕೆ. ರಾಮಚಂದ್ರಪ್ಪನವರ ನಿಧನಕ್ಕೆ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ.

# ಲಸಿಕೆಗೆಂದು ಹೋಗಿ - ಸೋಂಕು ತಗಲುವ ಸಾಧ್ಯತೆ

### ಓದುಗರ ಪತ್ರ

**ಮಾನ್ಯರೇ,**

ಕೋವಿಡ್ 19 ಸೋಂಕು ಹರಡುವ ಸರಪಳಿಯನ್ನು ತುಂಡರಿಸಲು ಹೆಚ್ಚುವರಿ ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡಿದ್ದರ ನಿಮಿತ್ತ ಇಂದಿನಿಂದ 24 ಮೇ ವರೆಗೆ ಪರಿಷ್ಕೃತ ಮಾರ್ಗಸೂಚಿಯೊಂದಿಗೆ ಲಾಕ್‌ಡೌನ್ ನಿಯಮಗಳನ್ನು ಪಾಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದರೂ.... ದಾವಣಗೆರೆಯ ಚಿಗಟೇರಿ ಆಸ್ಪತ್ರೆಯ ಲಸಿಕಾ ಕೇಂದ್ರದಲ್ಲಿ ಕೊರೊನಾಗೆಂದು ನೀಡುತ್ತಿರುವ ಕೋವ್ಯಾಕ್ಸಿನ್ 2ನೇ ಡೋಸ್ ಲಸಿಕೆ ಪಡೆಯಲು ಪ್ರತಿದಿನ ಸುಮಾರು 300 ರಿಂದ 400 ಜನರು ಮುಂಜಾನೆಯೆ 6.00 ಗಂಟೆಗೆ ಸೇರುತ್ತಿದ್ದಾರೆ. ಆದರೆ, ಲಸಿಕೆಯ ಟೋಕನ್ (ಬೆಳಿಗ್ಗೆ 8.30ಕ್ಕೆ ಕೊಡುತ್ತಾರೆ ಯಾವ ಟೋಕನ್ ಕ್ರಮ ಸಂಖ್ಯೆಯಲ್ಲಿ ಇರುವುದಿಲ್ಲ) ಕೇವಲ 150 ರಿಂದ 180 ಜನರಿಗೆ ಕೊಡುತ್ತಾರೆಂದು ಹೇಳುತ್ತಾರೆ. ಇನ್ನು ಕೆಲವು ಟೋಕನ್‌ಗಳನ್ನು ಕೊರೊನಾ ವಾರಿಯರ್ಸ್‌ಗೆ ನೀಡುತ್ತಿದ್ದಾರಂತೆ... ಹೀಗೆ ಜನಸಾಮಾನ್ಯರು ಅವು ಇಷ್ಟು ಬೇಗ ಹೇಗೆ ಮುಗಿದವು...ಎಂದೆಲ್ಲಾ ವಾದ-ವಿವಾದಗಳು ದಿನವೂ ನಡೆಯುತ್ತಿರುವುದು ಸಾಮಾನ್ಯವಾಗಿದೆ.

ಹೀಗಾಗಿ ಮೊದಲ ಡೋಸ್ ಪಡೆದು (45-50 ಅವಧಿ ಮೀರಿದ) ಹಿರಿಯ ನಾಗರಿಕರು ಬೆಳ್ಳಂಬೆಳಿಗ್ಗೆ ಲಸಿಕಾ ಕೇಂದ್ರಕ್ಕೆ ಪ್ರತಿದಿನ ಆಶಾವಾದದಿಂದ ಟೋಕನ್ ಇಂದು ಸಿಗುತ್ತದೆ... ನಾಳೆ ಸಿಗುತ್ತದೆ ಎಂದು ದೌಡಾಯಿಸಿ ಬಂದು ಸರತಿಯಲ್ಲಿ ನಿಂತಿರುವುದು (ವಯಸ್ಸಾದವರೂ ಮೂರರಿಂದ ನಾಲ್ಕು ತಾಸುಗಳು ನಿಲ್ಲಲು ಸಾಧ್ಯವೇ ಊಹಿಸಿ) ಗಮನಿಸಿದರೆ.... 'ಲಸಿಕೆಗೆಂದು ಹೋಗಿ - ಸೋಂಕು ತಗುಲಿಸಿಕೊಂಡು ಬರುವ ಸಾಧ್ಯತೆ' ಖಂಡಿತಾ ಇದೆ ಎಂದು ಮನೆಯವರ ಕಳವಳ.

ಹೀಗೆ ಪ್ರತಿದಿನವೂ ಲಸಿಕೆಗಾಗಿ ಚಿಗಟೇರಿ ಆಸ್ಪತ್ರೆಯ ಲಸಿಕಾ ಕೇಂದ್ರಕ್ಕೆ (ಜಿಲ್ಲಾ ಕೋವಿಡ್ ಕೇಂದ್ರದಲ್ಲಿನ ಸೋಂಕಿತರ ಗಾಳಿ ಬೀಸಿದರೆ) ಬರುವ ಜನರಿಗೆ ಸೋಂಕು ತಗುಲಿದರೆ... ನಮ್ಮ ಜಿಲ್ಲೆ ಡೇಂಜರ್ ಜೋನ್ ಪಟ್ಟಿಯಲ್ಲಿ ಸೇರುವ ಸಾಧ್ಯತೆ ಇದೆ.

ಇದಕ್ಕೆ ಪರಿಹಾರ ಏನೆಂದರೆ... ಪ್ರತಿದಿನ ಲಸಿಕೆ ಪಡೆಯಲು ಬರುವ ಹಿರಿಯ ನಾಗರಿಕರ ಆಧಾರ್ ಕಾರ್ಡ್ ಹಾಗೂ ಮೊಬೈಲ್ ನಂಬರ್ ಪಡೆದು... ಅವರು ಮೊದಲ ಡೋಸ್ ಪಡೆದು ದಿನಾಂಕ ಕಂಪ್ಯೂಟರ್ ನಿಂದ ತಿಳಿದು ಅಲ್ಲಿಂದ....ಅವರ ಲಸಿಕೆಯ ಅವಧಿ ಮೀರುವುದಕ್ಕೆ ಮುಂಚೆ 2ನೇ ಡೋಸ್ ನೀಡಲು ಸಾಧ್ಯವಾಗುವ ದಿನವನ್ನು ಗುರುತಿಸಿ ಟೋಕನ್ ನೀಡಿದರೆ.... ಅವರು ತಿಳಿಸಿದ ದಿನದಂದು ಬಂದು ಲಸಿಕೆಯನ್ನು ಪಡೆಯಲು ಬರಬಹುದು. ಸುಖಾಸುಮ್ಮನೆ ಲಾಕ್ ಡೌನ್ ಅವಧಿಯಲ್ಲಿ ಆರೋಗ್ಯವಾಗಿರುವ ಜನರಿಗೆ ಲಸಿಕೆಗಾಗಿ ತಿರುಗಾಡಿಸುವುದು ಎಷ್ಟು ಸರಿ.

ಇದು ನನ್ನ ಸಲಹೆ ಮಾತ್ರ. ಈ ಒಂದು ಕೆಲಸಕ್ಕೆ ಕೊರೊನಾ ವಾರಿಯರ್ಸ್ ಎಂದು ಸೇವೆ ಸಲ್ಲಿಸಲು ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳು ಖಂಡಿತಾ ಮುಂದೆ ಬರುತ್ತವೆ.

- ರಘುನಾಥರಾವ್ ತಾಪ್ಸೆ,
ದಾವಣಗೆರೆ. 9945595929

## ಆಕ್ಸಿಜನ್ ಸಮಸ್ಯೆ : 11 ಸಾವು

ತಿರುಪತಿ, ಮೇ 10 - ಇಲ್ಲಿನ ರುವಾ ಸರ್ಕಾರಿ ಆಸ್ಪತ್ರೆಯಲ್ಲಿ ಐ.ಸಿ.ಯು.ನಲ್ಲಿದ್ದ ಕನಿಷ್ಠ 11 ಕೊರೊನಾ ಸೋಂಕಿತರು ಆಕ್ಸಿಜನ್ ಪೂರೈಕೆಯಲ್ಲಿ ಸಮಸ್ಯೆಯಾಗಿ ಸಾವನ್ನಪ್ಪಿದ್ದಾರೆ. ಆಕ್ಸಿಜನ್ ಸಿಲಿಂಡರ್ ಮರು ಅಳವಡಿಕೆ ಮಾಡುವಲ್ಲಿ ಐದು ನಿಮಿಷ ವಿಳಂಬವಾಗಿತ್ತು. ಇದರಿಂದಾಗಿ ಆಕ್ಸಿಜನ್ ಒತ್ತಡ ಕಡಿಮೆಯಾಗಿ ಸಾವುಗಳು ಸಂಭವಿಸಿವೆ ಎಂದು ಚಿತ್ತೂರು ಜಿಲ್ಲೆಯ ಜಿಲ್ಲಾಧಿಕಾರಿ ಎಂ. ಹರಿ ನಾರಾಯಣನ್ ತಿಳಿಸಿದ್ದಾರೆ.

ಐದು ನಿಮಿಷಗಳ ನಂತರ ಆಕ್ಸಿಜನ್ ಪೂರೈಕೆ ಸಮರ್ಪಕವಾಗಿದೆ. ಆದರೆ, ಕೊರೊನಾ ಸೋಂಕಿತರ ಸಾವುಗಳನ್ನು ತಡೆಯಲು ಸಾಧ್ಯವಾಗಿಲ್ಲ ಎಂದವರು ಹೇಳಿದ್ದಾರೆ. ರುವಾ ಆಸ್ಪತ್ರೆಯಲ್ಲಿ 700 ಕೊರೊನಾ ಸೋಂಕಿತರು ಐ.ಸಿ.ಯು. ಹಾಗೂ ಆಕ್ಸಿಜನ್ ಬೆಡ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## 5ನೇ ಬಾರಿ ತೈಲ ಬೆಲೆ ಏರಿಕೆ

### ಮಹಾರಾಷ್ಟ್ರದಲ್ಲಿ 100 ರೂ. ಪೆಟ್ರೋಲ್

ನವದೆಹಲಿ, ಮೇ 10 – ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಸೋಮವಾರ ಮತ್ತೆ ಹೆಚ್ಚಾಗಿದೆ. ವಾರದಲ್ಲಿ ಐದನೇ ಬಾರಿ ತೈಲ ಬೆಲೆ ಹೆಚ್ಚಾಗಿರುವುದರಿಂದ ಮಹಾರಾಷ್ಟ್ರದಲ್ಲಿ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದೆ. ರಾಜಸ್ಥಾನ ಹಾಗೂ ಮಧ್ಯ ಪ್ರದೇಶಗಳಲ್ಲಿ ಈಗಾಗಲೇ ಪೆಟ್ರೋಲ್ ಬೆಲೆ 100 ರೂ.ಗಳನ್ನು ಮೀರಿದೆ. ಸೋಮವಾರ ಲೀಟರ್ ಪೆಟ್ರೋಲ್ ಬೆಲೆಯನ್ನು 26 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 33 ಪೈಸೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ.

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ-577 002.

ಬ್ಯಾಂಕಿನ ಸದಸ್ಯರು/ಠೇವಣಿದಾರರ/ಗ್ರಾಹಕರ ಗಮನಕ್ಕೆ

ನಗರದಲ್ಲಿ ಕೊರೊನಾ ವೈರಸ್ ಹರಡುವಿಕೆಯನ್ನು ತಡೆಗಟ್ಟುವುದರ ಮುನ್ನೆಚ್ಚರಿಕೆ ಕ್ರಮವಾಗಿ ಕರ್ನಾಟಕ ಸರ್ಕಾರದ ಆದೇಶ ಹಾಗೂ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ 4 ತಾಸುಗಳಿಗೆ ಬ್ಯಾಂಕಿಂಗ್ ವ್ಯವಹಾರವನ್ನು ಸೀಮಿತಗೊಳಿಸಿದ್ದು, ಗ್ರಾಹಕರ ಅನುಕೂಲಕ್ಕಾಗಿ ನಮ್ಮ ಬ್ಯಾಂಕಿನ ವ್ಯವಹಾರದ ವೇಳೆಯನ್ನು ದಿನಾಂಕ 11.05.2021 ರಿಂದ 24.05.2021ರವರೆಗೆ ಬೆಳಗ್ಗೆ 9.00 ಘಂಟೆಯಿಂದ ಮಧ್ಯಾಹ್ನ 1.00 ಘಂಟೆಯವರೆಗೆ ಮಾತ್ರ ನಿಗದಿಗೊಳಿಸಿದೆ. ಆದ್ದರಿಂದ ಗ್ರಾಹಕರು ಸಹಕರಿಸಲು ಈ ಮೂಲಕ ಕೋರಿದೆ.

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು — ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು — ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು

# ಆಕ್ಸಿಜನ್‌ಗಾಗಿ ಪರಿತಪಿಸುತ್ತಿರುವ ಆಸ್ಪತ್ರೆಗಳು : ಸೈಫುಲ್ಲಾ

ದಾವಣಗೆರೆ, ಮೇ 10- ಕೊರೊನಾ ಹಾಗೂ ಇತರೆ ರೋಗಗಳಿಗೆ ಚಿಕಿತ್ಸೆ ನೀಡಲು ಆಕ್ಸಿಜನ್ ಬಳಸುವ ಬಹುತೇಕ ಖಾಸಗಿ ಆಸ್ಪತ್ರೆಗಳು ಸಂಪೂರ್ಣವಾಗಿ ಜಂಬೋ ಆಕ್ಸಿಜನ್ ಸಿಲಿಂಡರ್‌ಗಳನ್ನು ಅವಲಂಬಿಸಿವೆ. ಈ ಆಸ್ಪತ್ರೆಗಳಿಗೆ ಖಾಸಗಿ ಸಂಸ್ಥೆಗಳೇ ಆಕ್ಸಿಜನ್ ಪೂರೈಸುತ್ತವೆ.

ನಗರದ ರೇಣುಕ ಗ್ಯಾಸ್ ಏಜೆನ್ಸಿ ಸೇರಿದಂತೆ ಹಲವು ಏಜೆನ್ಸಿಗಳು ಆಕ್ಸಿಜನ್ ಪೂರೈಸುತ್ತವೆ. ಕೊರೊನಾ ತೀವ್ರವಾದ ನಂತರ ಆಕ್ಸಿಜನ್‌ಗಾಗಿ ಖಾಸಗಿ ಆಸ್ಪತ್ರೆಗಳು ಮತ್ತಷ್ಟು ಶ್ರಮಿಸಬೇಕಾಗಿದೆ. ಆಕ್ಸಿಜನ್‌ಗಾಗಿ ಕೆಲವೊಮ್ಮೆ ಬೇರೆ ಬೇರೆ ಊರುಗಳಿಗೂ ಅಲೆಯಬೇಕಾಗುತ್ತದೆ ಎಂದು ಖಾಸಗಿ ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಪೂರೈಕೆಯ ಅನಿಶ್ಚಿತತೆಯ ಜೊತೆಗೆ, ಬೆಲೆಯೂ ಏರಿಳಿತವಾಗುತ್ತಿರುತ್ತದೆ. ಖಾಸಗಿ ಆಕ್ಸಿಜನ್‌ಗೆ ಬೆಲೆ ನಿಗದಿಯಾಗಿಲ್ಲ. ಇದೆಲ್ಲಾ ಕಾರಣಗಳಿಂದಾಗಿ ಆಕ್ಸಿಜನ್ ಬೆಡ್ ಸಂಖ್ಯೆ ಹೆಚ್ಚಿಸಲು ಹಿಂಜರಿಯುವ ಪರಿಸ್ಥಿತಿ ಇದೆ ಎಂದು ಮೂಲಗಳು ಹೇಳಿವೆ.

ಸಾಮಾನ್ಯ ಸ್ಥಿತಿಯಲ್ಲಿಯೇ ಈ ಸಮಸ್ಯೆಗಳು ಇರುವಾಗ, ಗ್ಯಾಸ್ ಸಂಸ್ಥೆಗಳು ಪೂರೈಕೆ ಮಾಡದೇ ಇದ್ದರೆ ಪರಿಸ್ಥಿತಿ ಇನ್ನಷ್ಟು ಉಲ್ಬಣಿಸುವುದು ನಿಶ್ಚಿತ.

ಕೇವಲ ಕೊರೊನಾ ರೋಗಿಗಳಷ್ಟೇ ಅಲ್ಲದೇ, ಕೊರೊನಾದಿಂದ ಚೇತರಿಸಿಕೊಂಡವರಿಗೂ ಸಹ ಸ್ವಲ್ಪ ದಿನಗಳ ಕಾಲ ಆಕ್ಸಿಜನ್ ಬೇಕಾಗುವ ಸಾಧ್ಯತೆ ಇರುತ್ತದೆ. ಅವರೆಲ್ಲರೂ ಖಾಸಗಿ ಆಕ್ಸಿಜನ್ ಪೂರೈಕೆಯನ್ನೇ ಅವಲಂಬಿಸಿದ್ದಾರೆ ಎಂದು ಆಕ್ಸಿಜನ್ ಪೂರೈಕೆ ಸಂಸ್ಥೆಯ ಮಾಲೀಕರೂ ಆದ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ತಿಳಿಸಿದ್ದಾರೆ.

## 18 ವರ್ಷ ಮೇಲ್ಪಟ್ಟವರಿಗೆ 1ನೇ ಡೋಸ್ ಲಸಿಕೆ

ದಾವಣಗೆರೆ, ಮೇ 10- ಭಾರತ ಸರ್ಕಾರದಿಂದ ಸರಬರಾಜಾಗಿರುವ ಲಸಿಕೆಗಳಲ್ಲಿ ಜಿಲ್ಲೆಯಲ್ಲಿ 1ನೇ ಡೋಸ್‌ಗೆ 18 ರಿಂದ 44 ವರ್ಷದವರೆಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಮೇ 11 ರಿಂದ ಕೋವಿಡ್-19 ಲಸಿಕೆ ನೀಡಲಾಗುವುದು.

ಪ್ರತಿ ಕೇಂದ್ರದಲ್ಲಿ 150 ಫಲಾನುಭವಿಗಳಿಗೆ ಮಾತ್ರ ಅವಕಾಶವಿದ್ದು, ಅರ್ಹ ಫಲಾನುಭವಿಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡು ಲಸಿಕಾ ಕೇಂದ್ರಗಳಿಗೆ ಬರಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ.

# ಕಾದರೂ ಸಿಗದ ಲಸಿಕೆ : ತೀವ್ರ ಅಸಮಾಧಾನ

## 2ನೇ ಲಸಿಕೆಗಾಗಿ ಕಾಯುವ, ಅಲೆದಾಟಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ



ದಾವಣಗೆರೆ, ಮೇ 10- ಕೊರೊನಾ ಸೋಂಕು ತಗುಲದಿರಲೆಂದು ಸದ್ಯಕ್ಕೆ ನೀಡಲಾಗುತ್ತಿರುವ ಎರಡನೇ ಲಸಿಕೆಗಾಗಿ ಕಾಯುವಂತಾಗಿರುವುದಕ್ಕೆ, ಅಲೆದಾಡುವಂತಾಗಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿದೆ.

ಲಸಿಕೆ ಪಡೆಯಲಿಚ್ಚಿಸುವವರಿಗೆ ಸರಿಯಾದ ಮಾಹಿತಿ, ಗುರುತಿಸುವಿಕೆ, ಸಮಯಕ್ಕೆ ಅನುಗುಣವಾಗಿ ಲಸಿಕೆ ಹಾಕುವ ಕ್ರಮ ಪಾಲನೆಯಾಗಬೇಕು. ಬಹಳಷ್ಟು ಸಮಯದವರೆಗೂ ಕಾದರೂ ಲಸಿಕೆ ಸಿಗದೇ ವಾಪಸ್ ತೆರಳುವ, ಪುನಃ ಲಸಿಕೆಗಾಗಿ ಅಲೆದಾಡುವುದು ತಪ್ಪಬೇಕು. ಎರಡನೇ ಲಸಿಕೆಯ ನಿಗದಿತ ಸಮಯ ಬಂದವರ ಗುರುತಿಸಿ, ಸೂಕ್ತ ಮಾಹಿತಿಯೊಂದಿಗೆ ಲಸಿಕೆ ನೀಡುವ ಕೆಲಸ ಆಗಬೇಕೆಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

ಸದ್ಯಕ್ಕೆ 45 ವರ್ಷ ಮೇಲ್ಪಟ್ಟವರಿಗೆ ಎರಡನೇ ಲಸಿಕೆ ಹಾಕುವ ಕೆಲಸವಾಗುತ್ತಿದೆ. ಇಂದು ಜಿಲ್ಲಾಸ್ಪತ್ರೆಯಲ್ಲಿ ಎರಡನೇ ಲಸಿಕೆ ಪಡೆಯುವ ಅವಧಿ ಬಂದವರಿಗೆ ಲಸಿಕೆ ಹಾಕುವ ಕಾರ್ಯ ನಡೆಸಲಾಯಿತು. ಈ ವೇಳೆ ಸುಮಾರು 200 ಮಂದಿಗೆ ಮಾತ್ರ ಲಸಿಕೆ ಹಾಕಲಾಗಿದೆ.

ಇದರಲ್ಲಿ ಸುಮಾರು 180 ಸಾರ್ವಜನಿಕರಿಗೆ ಹಾಗೂ ಉಳಿದದ್ದು ಆಸ್ಪತ್ರೆಯ ವೈದ್ಯರು, ಶುಶ್ರೂಷಕರು, ಸಿಬ್ಬಂದಿಗಳು ಸೇರಿದಂತೆ ಕೊರೊನಾ ವಾರಿಯರ್ಸ್ ಗಳಿಗೆ ಲಸಿಕೆ ನೀಡಲಾಗಿದೆ ಎಂದು ಹೇಳಲಾಗಿದೆ.

ತಾವೂ ಎರಡನೇ ಲಸಿಕೆ ಪಡೆಯಬೇಕೆಂದು ಬೆಳಂಬೆಳಗ್ಗೆ ಜನರು ಸರತಿ ಸಾಲಿನಲ್ಲಿ ನಿಂತು ಕಾದಿದ್ದರು. ಇವರಲ್ಲಿ ಹೆಚ್ಚಿನವರು 60 ವರ್ಷ ಮೇಲ್ಪಟ್ಟ ವೃದ್ಧರೇ ಆಗಿದ್ದರು. ಕೆಲವರಿಗೆ ಲಸಿಕೆ ಭಾಗ್ಯ ಸಿಕ್ಕಿಲ್ಲ. ಆಗ ಮುಂಜಾನೆಯಿಂದಲೇ ಕಾದು ಕುಳಿತರೂ ನಮಗೇಕೆ ಲಸಿಕೆ ನೀಡಲಿಲ್ಲ. ನಾವೆಲ್ಲಾ ವಯೋವೃದ್ಧರಿದ್ದೇವೆ. ಲಸಿಕೆಗಾಗಿ ಅಲೆದಲೆದು ಸಾಕಾಗಿದೆ ಎಂಬುದಾಗಿ ಅಸಮಾಧಾನ ವ್ಯಕ್ತವಾಗಿದೆ. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಸಮಜಾಯಿಷಿ ನೀಡಿ ಸಮಾಧಾನಪಡಿಸಿದ್ದಾರೆ.

ಆಸ್ಪತ್ರೆಯ ಲಸಿಕಾ ಕೇಂದ್ರದ ಬಳಿ ಕೆಲ ವೃದ್ಧರು ಮನೆಯಿಂದಲೇ ಚೇರ್ ತಂದಿದ್ದ ಸಂಗತಿ ಜರುಗಿದೆ. ಕುಳಿತುಕೊಳ್ಳಲು ವ್ಯವಸ್ಥೆ ಕಾಣದ ಕಾರಣ ಲಸಿಕೆ ಪಡೆಯಲು ಹಿಂದೆ ಬಂದಾಗ ನಿಲ್ಲಲು ಆಗದೇ ಚೇರ್ ತಂದಿರುವುದಾಗಿ ಮಾತುಗಳು ಕೇಳಿ ಬಂದಿವೆ.

ಎರಡನೇ ಲಸಿಕೆ ಪಡೆಯಲು ಆಸ್ಪತ್ರೆಯ ವೈದ್ಯರು, ಶುಶ್ರೂಷಕರು, ಸಿಬ್ಬಂದಿಗಳು ಸಹ ಸರತಿ ಸಾಲಿನಲ್ಲಿ ನಿಂತಿದ್ದ ದೃಶ್ಯ ಕಂಡು ಬಂತು. ಇವರುಗಳಿಗೆ ಆಸ್ಪತ್ರೆ ಆವರಣದಲ್ಲಿ ಪ್ರತ್ಯೇಕ ಸ್ಥಳದಲ್ಲಿ ಲಸಿಕೆ ನೀಡಲಾಗಿದೆ.

**ಲಸಿಕೆಗೆ ಲೆಕ್ಕಪರಿಶೋಧಕರೋರ್ವರ ಅಲೆದಾಟ-ಸೂಕ್ತ ಮಾಹಿತಿಗೆ ಸಲಹೆ:** ಮೊದಲ ಲಸಿಕೆಯಾಗಿ ಕೋವ್ಯಾಕ್ಸಿನ್ ಪಡೆದಿದ್ದ ತಾವೂ ಸಹ ಎರಡನೇ ಲಸಿಕೆ ಪಡೆಯಲು ಜಿಲ್ಲಾಸ್ಪತ್ರೆಗೆ ತೆರಳಿದಾಗ ಕಾದರೂ ಲಸಿಕೆ ಸಿಗದೇ ವಾಪಸ್ಸಾಗಬೇಕಾಯಿತು. ಆನ್ ಲೈನ್ ಮುಖೇನವೂ ಲಸಿಕೆಗಾಗಿ ಹುಡುಕಾಟ ನಡೆಸಿದಾಗ ಕೊಂಡಜ್ಜಿ ಮತ್ತು ಆನಗೋಡು ಲಸಿಕಾ ಕೇಂದ್ರದಲ್ಲಿರುವ ಬಗ್ಗೆ ಮಾಹಿತಿ ನಮೂದಿಸಲಾಗಿತ್ತು. ಈ ಆಧಾರದ ಮೇಲೆ ಕೊಂಡಜ್ಜಿ ಲಸಿಕಾ ಕೇಂದ್ರಕ್ಕೆ ತೆರಳಿದಾಗ ಲಸಿಕೆ ಇಲ್ಲ ಎಂಬ ಮಾತು ಕೇಳಿ ಬಂತು ಎಂಬುದಾಗಿ ಬೇಸರ ವ್ಯಕ್ತಪಡಿಸಿದರು.

ಮೊದಲ ಲಸಿಕೆ ಪಡೆದದ್ದು ವ್ಯರ್ಥವಾಗಲಿದೆ. ಹಾಗಾಗಿ ಎರಡನೇ ಲಸಿಕೆ ಪಡೆಯಲು ನಿಗದಿತ ಸಮಯ ಸಮೀಪಿಸಿದವರನ್ನು ಗುರುತಿಸಿ ಪ್ರಥಮಾದ್ಯತೆ ಮೇರೆಗೆ ಲಸಿಕೆ ನೀಡಬೇಕು. ಅವರ ಮೊಬೈಲ್ ನಂಬರ್ ಗೆ ಲಸಿಕೆ ಪಡೆಯುವ ದಿನಾಂಕದ ಬಗ್ಗೆ ಸಂದೇಶ ರವಾನಿಸಬೇಕು. ಆಗ ಕಾಯುವ, ಅಲೆದಾಡುವ ಪ್ರಮೇಯವೇ ಬಾರದು ಎಂಬುದು ಲೆಕ್ಕಪರಿಶೋಧಕ ಅರುಣಾಚಲ ಶೆಟ್ಟಿ ಅವರು 'ಜನತಾವಾಣಿ' ಮುಖೇನ ಸಂಬಂಧಿಸಿದ ಇಲಾಖೆಗೆ ಸಲಹೆ ನೀಡಿದರು.

# ರಾಣೇಬೆನ್ನೂರು : ಲಾಕ್‌ಡೌನ್ ಮಾರ್ಪಾಡಿಗೆ ಶಾಸಕರ ಅಭಿಪ್ರಾಯ



ರಾಣೇಬೆನ್ನೂರು, ಮೇ 10- ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಜಿಲ್ಲಾಧಿಕಾರಿಗಳ ಸಂಪರ್ಕದೊಂದಿಗೆ, ಸ್ಥಳೀಯವಾಗಿ ಸಂಘ - ಸಂಸ್ಥೆಗಳ, ವರ್ತಕರ ಜೊತೆ ಚರ್ಚಿಸಿ, ಸರ್ಕಾರದ ಈಗಿರುವ ನಿಯಮಗಳಲ್ಲಿ ಮಾರ್ಪಾಡು ಮಾಡಿ, ವಾರದಲ್ಲಿ 5 ದಿನ ಸಂಪೂರ್ಣ ಲಾಕ್‌ಡೌನ್ ಮಾಡಿ, ಶನಿವಾರ ಬೆಳಿಗ್ಗೆ 6 ರಿಂದ 10 ರವರೆಗೆ, ಭಾನುವಾರ ಪೂರ್ತಿ ದಿನ ವ್ಯಾಪಾರ ವಹಿವಾಟು ನಡೆಸಲು ಅವಕಾಶ ಕೊಡುವುದರಿಂದ ಸೋಂಕು ತಡೆಯಲು ಸಾಧ್ಯ ಎನ್ನುವ ಅಭಿಪ್ರಾಯ ಶಾಸಕರದ್ದಾಗಿದೆ.

ಕೋವಿಡ್ ಸೋಂಕು ಹರಡದಂತೆ ತಡೆಯಲು ಜಿಲ್ಲಾ ಉಸ್ತುವಾರಿ ಸಚಿವರು ನನ್ನ ಕ್ಷೇತ್ರಕ್ಕೆ ಅತೀ ಹೆಚ್ಚು ಸಹಾಯ ಸಹಕಾರ ನೀಡುತ್ತಿದ್ದಾರೆ. ಸ್ಥಳೀಯವಾಗಿ ಎಂತಹದ್ದೇ ಬದಲಾವಣೆ ಅವಶ್ಯವೆನಿಸಿದಲ್ಲಿ ಕ್ರಮ ಜರುಗಿಸುವಂತೆ ತಿಳಿಸಿದ್ದಾರೆ. ಈ ದಿಶೆಯಲ್ಲಿ ತಾವು ಸೂಕ್ತ ಕ್ರಮ ಕೈಗೊಂಡು ನನ್ನ ಕ್ಷೇತ್ರದ ಜನರ ಪ್ರಾಣ ರಕ್ಷಣೆ ಹೊಣೆ ನನ್ನದಾಗಿದ್ದು, ಜನತೆ ಸಹಕಾರ ನೀಡುವಂತೆ ಪತ್ರಿಕೆಯವರ ಜೊತೆ ಮಾತನಾಡಿ, ಶಾಸಕರು ಮನವಿ ಮಾಡಿದರು.

ಇಂದು ಇಲ್ಲಿನ ತಾ.ಪಂ ಸಭಾಭವನದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಹಶಿಲ್ದಾರ್ ಶಂಕರ್, ಪೊಲೀಸ್ ಅಧಿಕಾರಿಗಳಾದ ಟಿ.ವಿ.ಸುರೇಶ್, ಗೌಡಪ್ಪ ಗೌಡ್ರ, ಆರೋಗ್ಯ, ಅರಣ್ಯ, ಪಂಚಾಯತ್ ರಾಜ್ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

### ದ್ವಿಚಕ್ರ ವಾಹನ ತಳ್ಳುವ ಶಿಕ್ಷೆ?

ಸರ್ಕಾರದ ಸೂಚನೆಯನ್ನು ಅಲಕ್ಷಿಸಿ, ಇಂದು ರಸ್ತೆಗೆ ಇಳಿದ ದ್ವಿಚಕ್ರ ವಾಹನಗಳನ್ನು ಬಸ್ ನಿಲ್ದಾಣದಿಂದ ಗ್ರಾಮೀಣ ಠಾಣೆವರೆಗೆ ಸುಮಾರು 1 ಕಿ.ಮೀ ಗೂ ಹೆಚ್ಚು ದೂರ ತಳ್ಳಿಕೊಂಡು ಹೋಗುವ ಶಿಕ್ಷೆಯನ್ನು ಸವಾರರಿಗೆ ವಿಧಿಸಿದ್ದು, ಇಂದು ರಾಣೇಬೆನ್ನೂರು ನಗರದಲ್ಲಿ ಕಂಡುಬಂದಿತು.

ಡಿವೈಎಸ್ಪಿ ಟಿ.ವಿ.ಸುರೇಶ್ ಹೇಳುವಂತೆ ಅನಾವಶ್ಯಕವಾಗಿ ರಸ್ತೆಗಿಳಿದ 42 ದ್ವಿಚಕ್ರ ವಾಹನಗಳು, ಆಟೋ ರಿಕ್ಷಾ ಇತರೆ ವಾಹನಗಳಿಂದ ಇಂದು ವಸೂಲಿ ಮಾಡಿದ ದಂಡದ ಮೊತ್ತ 60 ಸಾವಿರ ರೂ.ದಷ್ಟಾಗಿದ್ದು, ಈ ಕಾರ್ಯಾಚರಣೆ ಪ್ರತಿದಿನ ನಡೆಯಲಿದೆ ಎಂದಿದ್ದಾರೆ.

**ವಾಹನ ತಳ್ಳಿದ ಸ್ಥಾಯಿ ಸಮಿತಿ ಛೇರ್ಮನ್ :** ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳನ್ನು ತಡೆಯುವ ಪೊಲೀಸರ ಕಾರ್ಯಾಚರಣೆಗೆ ನಗರಸಭೆ ಸ್ಥಾಯಿ ಸಮಿತಿ ಛೇರ್ಮನ್ ಸಿದ್ದಪ್ಪ ಬಾಗಲರ ಅವರು ಸಿಲುಕಿದ್ದು, ವಾಹನ ತಳ್ಳುವುದರ ಜೊತೆಗೆ ದಂಡ ಸಹ ಭರಿಸಿದರೆಂದು ಹೇಳಲಾಗಿದೆ.

### ಜಿಲ್ಲಾಧಿಕಾರಿ ಭೇಟಿ

ಲಾಕ್‌ಡೌನ್ ಪ್ರಥಮ ದಿನವಾದ ಇಂದು, ಜಿಲ್ಲಾಧಿಕಾರಿ ಶೆಟ್ಟೆಣ್ಣನವರ್ ಅವರು, ರಾಣೇಬೆನ್ನೂರು ನಗರದಲ್ಲಿ ಸಂಚರಿಸಿ, ಪರಿಸ್ಥಿತಿಯನ್ನು ವೀಕ್ಷಿಸುವುದರ ಜೊತೆಗೆ ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮನವಿ ಮಾಡಿದರು. ತಹಶೀಲ್ದಾರ್ ಶಂಕರ್, ಡಿವೈಎಸ್ಪಿ ಟಿ.ವಿ.ಸುರೇಶ್ ಹಾಗೂ ಇತರರಿದ್ದರು.

# ಲಾಕ್‌ಡೌನ್ ನಂತರ ಪದವಿ ಪರೀಕ್ಷೆ ಫಲಿತಾಂಶ ಪ್ರಕಟ

## ದಾವಣಗೆರೆ ವಿವಿ ಕುಲಪತಿಯೊಂದಿಗೆ ವಿದ್ಯಾರ್ಥಿಗಳ ನೇರ ಫೋನ್-ಇನ್-ಕಾರ್ಯಕ್ರಮ

ದಾವಣಗೆರೆ, ಮೇ 10- ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ ಪದವಿಯ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಗಳು ಮುಗಿದಿದ್ದು, ಲಾಕ್‌ಡೌನ್ ಮುಗಿದ ನಂತರ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕುಲಪತಿ ಪ್ರೊ. ಶರಣಪ್ಪ ಹಲಸೆ ತಿಳಿಸಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಜೊತೆ ಸೋಮವಾರ ನೇರ ಫೋನ್-ಇನ್ ಕಾರ್ಯಕ್ರಮದಲ್ಲಿ ಮಾತನಾಡಿದ ಹಲಸೆ ಅವರು, ಪರೀಕ್ಷೆ ಫಲಿತಾಂಶದ ಬಗ್ಗೆ ಎಲ್ಲಾ ವಿದ್ಯಾರ್ಥಿಗಳಲ್ಲಿ ಕುತೂಹಲವಿದೆ. ಫಲಿತಾಂಶ ಪ್ರಕಟಣೆಗೆ ಸಿದ್ಧತೆ ನಡೆಯುತ್ತಿದ್ದಾಗಲೇ ಕೊರೊನಾ ಕಾರಣಕ್ಕಾಗಿ ಸ್ಥಗಿತಗೊಳಿಸಲಾಗಿದೆ. ಕಾಲೇಜು ಆರಂಭಕ್ಕೆ ಸರ್ಕಾರ ಅನುಮತಿ ನೀಡುತ್ತಿದ್ದಂತೆಯೇ ಫಲಿತಾಂಶ ಪ್ರಕಟಿಸಲಾಗುವುದು ಎಂದು ಭರವಸೆ ನೀಡಿದರು.

ಕೋವಿಡ್-19ರ ಕಾರಣಕ್ಕಾಗಿ ಬಿ.ಇಡಿ ಪದವಿಯ ಪಠ್ಯ ಮತ್ತು ಪ್ರಾಯೋಗಿಕ ಪರೀಕ್ಷೆಯೂ ವಿಳಂಬವಾಗಿದೆ. ಎರಡು ವರ್ಷಗಳಲ್ಲಿ ಮುಗಿಯಬೇಕಾಗಿದ್ದ ಪದವಿಗೆ ಮೂರು ವರ್ಷವಾಗುತ್ತಿದೆ. ಕೆಲವು ಕಾಲೇಜುಗಳಲ್ಲಿ ಕೋ ಆರ್ಡಿನೇಷನ್ ಸಮಿತಿ ಸಭೆ ವರದಿ ಬರಲು ತಡವಾದ ಕಾರಣ ಮಾರ್ಚ್ ಒಳಗೆ ಪರೀಕ್ಷೆ ನಡೆಸಲು ಸಾಧ್ಯವಾಗಲಿಲ್ಲ. ವೇಳಾಪಟ್ಟಿ ಸಿದ್ಧಪಡಿಸಿ, ಪರೀಕ್ಷೆಗೆ ಅಣಿಯಾಗುತ್ತಿದ್ದಂತೆ ಕೋವಿಡ್-19 ನಿಂದಾಗಿ ರಜೆ ನೀಡಲಾಗಿದೆ. ಆದರೆ, ಲಾಕ್‌ಡೌನ್ ನಂತರ ಆದ್ಯತೆ ಮೇರೆಗೆ ಪರೀಕ್ಷೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಸದ್ಯಕ್ಕೆ ಯಾವುದೇ ತರಗತಿಗೂ ಪರೀಕ್ಷೆ ಇಲ್ಲದೆ ಮುಂದಿನ ತರಗತಿಗೆ ತೇರ್ಗಡೆ ಮಾಡುವ ಉದ್ದೇಶ ವಿಶ್ವವಿದ್ಯಾನಿಲಯಕ್ಕೆ ಇಲ್ಲ. ಅಲ್ಲದೇ ಮುಂದಿನ ತರಗತಿಗಳಿಗೆ ಮೇ 12 ರಿಂದ ಆನ್‌ಲೈನ್‌ನಲ್ಲಿ ಪಾಠ ಆರಂಭಿಸುವಂತೆ ಎಲ್ಲಾ ಕಾಲೇಜುಗಳ ಪ್ರಾಧ್ಯಾಪಕರಿಗೂ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಹಿಂದುಳಿಯದಂತೆ ಗಮನ ನೀಡಲು ಆದ್ಯತೆ ನೀಡುವಂತೆಯೂ ತಿಳಿಸಲಾಗಿದೆ ಎಂದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನೆಟ್‌ವರ್ಕ್ ಸಿಗದೇ ಆನ್‌ಲೈನ್ ತರಗತಿಗಳಿಂದ ವಂಚಿತರಾಗುವ ಸಾಧ್ಯತೆಗಳಿವೆ. ಆದ್ದರಿಂದ ಪರ್ಯಾಯ ವ್ಯವಸ್ಥೆಗೂ ಆದ್ಯತೆ ನೀಡಬೇಕು. ಕೆಲವು ಕಾಲೇಜುಗಳಲ್ಲಿ ಆನ್‌ಲೈನ್‌ನಲ್ಲೂ ಪಾಠ ನಡೆಸುತ್ತಿಲ್ಲ. ಕಳೆದ ವರ್ಷ ಶೇ.50 ರಷ್ಟೂ ಪಾಠವನ್ನು ಹೇಳದೆ ಪರೀಕ್ಷೆ ನಡೆಸಲಾಯಿತು. ಇದರಿಂದ ಶಿಕ್ಷಣಕ್ಕೆ ಅಡ್ಡಿಯಾಯಿತು ಎಂದು ವಿದ್ಯಾರ್ಥಿಗಳು ಕುಲಪತಿ ಅವರಿಗೆ ದೂರು ನೀಡಿದರು.

ವಿದ್ಯಾರ್ಥಿಗಳ ಆತಂಕಕ್ಕೆ ಸ್ಪಂದಿಸಿದ ಕುಲಪತಿ ಪ್ರೊ. ಹಲಸೆ ಅವರು, ಕಳೆದ ಬಾರಿಯೂ ಕಡ್ಡಾಯವಾಗಿ ಪಾಠ ಮಾಡುವಂತೆ ಸೂಚಿಸಲಾಗಿತ್ತು. ಆಗಿರುವ ಲೋಪದ ಬಗ್ಗೆ ವಿಚಾರಣೆ ನಡೆಸಲಾಗುವುದು. ಈ ಬಾರಿ ಅದು ಮುಂದುವರೆಯಲು ಅವಕಾಶ ನೀಡುವುದಿಲ್ಲ. ವಿದ್ಯಾರ್ಥಿಗಳ ಹಿತಕ್ಕೆ ಧಕ್ಕೆಯಾದರೆ ಸಹಿಸುವುದಿಲ್ಲ. ಆನ್‌ಲೈನ್ ಅಲ್ಲದೇ ಲಾಕ್‌ಡೌನ್ ನಂತರ ಭೌತಿಕವಾಗಿಯೂ ಪಾಠ ಮಾಡಿ, ವಿದ್ಯಾರ್ಥಿಗಳಿಗೆ ಅರ್ಥೈಸುವಂತೆ ಮಾಡಲಾಗುವುದು. ಜೊತೆಗೆ ಪಠ್ಯಪೂರಕ ಅಧ್ಯಯನ ಸಾಮಗ್ರಿಗಳನ್ನು ವಿದ್ಯಾರ್ಥಿಗಳ ಪೋರ್ಟಲ್‌ಗೆ ಒದಗಿಸಲು ಸೂಚಿಸಲಾಗುವುದು ಎಂದು ಭರವಸೆ ನೀಡಿದರು.

ಕುಲಸಚಿವರಾದ ಪ್ರೊ. ಗಾಯತ್ರಿ ದೇವರಾಜ್, ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎಚ್.ಎಸ್. ಅನಿತಾ ಇದ್ದರು.

# ವಾಹನ ಬಳಕೆಗೆ ಅವಕಾಶ ನೀಡಲು ಛೇಂಬರ್ ಆಫ್ ಕಾಮರ್ಸ್ ಒತ್ತಾಯ

ದಾವಣಗೆರೆ,ಮೇ 10- ಅಗತ್ಯ ವಸ್ತುಗಳನ್ನು ಮಾರಾಟ ಮಾಡಲು ಮತ್ತು ಆ ವಸ್ತುಗಳನ್ನು ಖರೀದಿಸುವುದಕ್ಕೆ ಮಾರುಕಟ್ಟೆಗೆ ಹೋಗಿ ಬರಲು ವಾಹನ ಬಳಕೆಗೆ ಅವಕಾಶ ನೀಡುವಂತೆ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಜಿಲ್ಲಾಡಳಿತವನ್ನು ಒತ್ತಾಯಿಸಿದೆ.

ಜಿಲ್ಲಾಡಳಿತ ನಿಗದಿಪಡಿಸಿದ ಅವಧಿಯಲ್ಲಿ ಮಾರುಕಟ್ಟೆಗೆ ಮತ್ತು ಬ್ಯಾಂಕಿಗೆ ಹೋಗಿ ಬರಲು ಎಲ್ಲರಿಗೂ ಓಡಾಡಲು ಆಗುವುದಿಲ್ಲ. ಕಾರಣ, ವಾಹನ ಬಳಕೆಗೆ ಅವಕಾಶ ನೀಡಬೇಕು ಎಂದು ಸಂಸ್ಥೆಯ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ ಕೇಳಿಕೊಂಡಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಬಹುತೇಕರು ಮಂಡಿ ನೋವು, ಕಾಲು ನೋವಿನಿಂದ ಬಳಲುತ್ತಿದ್ದಾರೆ. ಇನ್ನೂ ಕೆಲವರಿಗೆ ವಯೋಸಹಜತೆಯಿಂದ ಓಡಾಡಲು ಸಾಧ್ಯವಾಗುವುದಿಲ್ಲ. ಮತ್ತೆ ಕೆಲವರು ವಾಹನಗಳಲ್ಲೇ ಸಂಚರಿಸುತ್ತಿರುವುದರಿಂದ ಅವರಿಗೆ ರಸ್ತೆಯಲ್ಲಿ ಓಡಾಡಿ ಅಭ್ಯಾಸವೇ ಇಲ್ಲ ಎಂದು ವೀರಣ್ಣ ಅವರು ವಾಹನ ಬಳಕೆ ಬಗ್ಗೆ ಪ್ರತಿಪಾದಿಸಿದ್ದಾರೆ.

ಒಟ್ಟಿನಲ್ಲಿ ಬಹುತೇಕ ಸಂಖ್ಯೆಯ ಜನರಿಗೆ ವಾಹನದ ಅವಶ್ಯಕತೆ ಇದ್ದು, ಈ ಹಿನ್ನೆಲೆಯಲ್ಲಿ ಮಾರ್ಗಸೂಚಿಯಲ್ಲಿ ಮಾರ್ಪಾಡು ಮಾಡಿಕೊಂಡು ಜನರಿಗೆ ವಾಹನ ಬಳಕೆಗೆ ಅವಕಾಶ ನೀಡಬೇಕು ಎಂದು ಸಂಸ್ಥೆಯ ಉಪಾಧ್ಯಕ್ಷ ಮಾಗಾನಹಳ್ಳಿ ನಿಜಾನಂದಪ್ಪ, ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ ಅವರುಗಳು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

**ನಾಗರಿಕರಲ್ಲಿ ಮನವಿ :** ದಿನ ದಿನಕ್ಕೂ ಹೆಚ್ಚುತ್ತಿರುವ ಕೊರೊನಾ ವೈರಸ್ ನಿಯಂತ್ರಣಕ್ಕೆ ಜಿಲ್ಲಾಡಳಿತ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದು, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರುಗಳ ನೇತೃತ್ವದ ಜಿಲ್ಲಾಡಳಿತದ ಶ್ರಮ ಶ್ಲಾಘನೀಯ ಎಂದು ಛೇಂಬರ್ ಆಫ್ ಕಾಮರ್ಸ್ ಮೆಚ್ಚುಗೆ ವ್ಯಕ್ತಪಡಿಸಿದೆ.

ಜಿಲ್ಲಾಡಳಿತದ ಕ್ರಮಕ್ಕೆ ಸಹಕಾರ ನೀಡುವ ನಿಟ್ಟಿನಲ್ಲಿ ಸಾರ್ವಜನಿಕರು ನಿಗದಿತ ಅವಧಿಯಲ್ಲಿ ಅಗತ್ಯ ವಸ್ತುಗಳನ್ನು ಪಡೆದುಕೊಂಡು, ಉಳಿದ ಸಮಯದಲ್ಲಿ ಮನೆಯಲ್ಲೇ ಇದ್ದು, ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು. ಈ ಮೂಲಕ ಕೊರೊನಾ ನಿಯಂತ್ರಣಕ್ಕೆ ಪ್ರತಿಯೊಬ್ಬರ ಸಹಕಾರ - ಶ್ರಮ ಅತ್ಯಗತ್ಯ ಎಂದು ಛೇಂಬರ್ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

## ರಾಜ್ಯಗಳಿಗೆ 9 ಲಕ್ಷ ಲಸಿಕೆ

ನವದೆಹಲಿ, ಮೇ 10 – ಮುಂದಿನ ಮೂರು ದಿನಗಳಲ್ಲಿ ರಾಜ್ಯಗಳಿಗೆ 9 ಲಕ್ಷ ಹೆಚ್ಚುವರಿ ಕೊರೊನಾ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ರಾಜ್ಯಗಳಿಗೆ ಇದುವರೆಗೂ ಉಚಿತವಾಗಿ 18 ಕೋಟಿ ಲಸಿಕೆಗಳನ್ನು ವಿತರಿಸಲಾಗಿದೆ. ಈ ಪೈಕಿ 16.89 ಕೋಟಿ ಡೋಸ್‌ಗಳನ್ನು ಬಳಸಲಾಗಿದೆ ಎಂದು ಸಚಿವಾಲಯ ಹೇಳಿದೆ.

# ಕುಂದುವಾಡ ಕೆರೆ ದುರಸ್ತಿ : ಬತ್ತುತ್ತಿರುವ ಕೊಳವೆ ಬಾವಿಗಳು

**ಗಡಿಗುಡಾಳ್ ಮಂಜುನಾಥ್ ಆತಂಕ**

ದಾವಣಗೆರೆ, ಮೇ 10- ಕುಂದುವಾಡ ಕೆರೆಯ ದುರಸ್ತಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಂಡು ಪೂರ್ಣಗೊಳಿಸುವಂತೆ ಮಹಾನಗರ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಒತ್ತಾಯಿಸಿದ್ದಾರೆ. ದುರಸ್ತಿಗಾಗಿ ಕೆರೆ ನೀರು ಖಾಲಿ ಮಾಡಿರುವುದರಿಂದ ಕೊಳವೆ ಬಾವಿಗಳು ಬತ್ತಿ ಹೋಗಿವೆ. ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದೆ. ಶೀಘ್ರವೇ ದುರಸ್ತಿ ಪೂರೈಸಿ ಹೊಳೆ ನೀರು ತುಂಬಿಸಿ ಸಮಸ್ಯೆ ಬಗೆಹರಿಸಲು ಮನವಿ ಮಾಡಿದ್ದಾರೆ.

## ರಾಜ್ಯಕ್ಕಿಂದು ಮೊದಲ ಆಕ್ಸಿಜನ್ ಎಕ್ಸ್‌ಪ್ರೆಸ್

ಬೆಂಗಳೂರು, ಮೇ 10 – ರಾಜ್ಯಕ್ಕೆ ಮೊದಲ ಆಕ್ಸಿಜನ್ ಎಕ್ಸ್‌ಪ್ರೆಸ್ ನಾಳೆ ಮಂಗಳವಾರ ಬರಲಿದೆ. 120 ಟನ್ ಆಕ್ಸಿಜನ್ ಹೊತ್ತಿರುವ ಆರು ಕ್ರಯೋಜನಿಕ್ ಕಂಟೈನರ್‌ಗಳು ಸೋಮವಾರ ಜೆಮ್‌ಷೆಡ್‌ಪುರ ಬಿಟ್ಟಿವೆ.

ರೈಲು ಮಂಗಳವಾರ ವೈಟ್‌ಫೀಲ್ಡ್‌ನಲ್ಲಿರುವ ಇನ್‌ಲ್ಯಾಂಡ್ ಕಂಟೈನರ್ ಡಿಪೋಗೆ ಬರಲಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಪ್ರತಿ ವಾರ್ಡ್‌ನಲ್ಲಿ ಕೊರೊನಾ 2ನೇ ಲಸಿಕೆ ಹಾಕಿಸಲು ಅವಕಾಶ ಮಾಡಿ ಕೊಡಿ



ದಾವಣಗೆರೆ, ಮೇ 10 - ನಗರಪಾಲಿಕೆ 38ನೇ ವಾರ್ಡ್ ಸದಸ್ಯ ಗಡಿ ಗುಡಾಳ್ ಮಂಜುನಾಥ್ ಹಾಗೂ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಗುರುಮೂರ್ತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ, ಕೊರೊನಾ ದಿನದಿಂದ ದಿನಕ್ಕೆ ಹೆಚ್ಚಾಗಿ ಹರಡುತ್ತಿರುವುದರಿಂದ ನಾಗರಿಕರು ಜಿಲ್ಲಾಸ್ಪತ್ರೆಗೆ ಬಂದು ಲಸಿಕೆ ಹಾಕಿಸಲು ಭಯಪಡುತ್ತಿದ್ದಾರೆ. ಆದ್ದರಿಂದ ಪ್ರತಿ ವಾರ್ಡ್‌ನಲ್ಲಿ ಕೊರೊನಾ 2ನೇ ಲಸಿಕೆ ಹಾಕಿಸಲು ಅವಕಾಶ ನೀಡಬೇಕು ಎಂದು ಮನವಿ ಸಲ್ಲಿಸಿದರು. ಲಸಿಕೆ ಹಾಕಿಸಲು ಬೇಕಾದ ಮೂಲಭೂತ ಸೌಲಭ್ಯ ಹಾಗೂ ಇನ್ನಿತರೆ ವ್ಯವಸ್ಥೆಯನ್ನು ತಾವು ಮಾಡಲು ಸಿದ್ಧವಿದ್ದು, ನಮ್ಮ ವಾರ್ಡ್ ನಾಗರಿಕರಿಗೆ ಕೊರೊನಾ 2ನೇ ಲಸಿಕೆ ಹಾಕಿಸಿಕೊಳ್ಳುವ ಅವಕಾಶ ನೀಡಬೇಕು ಎಂದು ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಜಿಲ್ಲಾಧಿಕಾರಿಗಳಿಗೆ ವಿನಂತಿಸಿದರು.

ಕುಂದುವಾಡ ಕೆರೆ ದುರಸ್ತಿ ಮಾಡಿಸುವ ಉದ್ದೇಶದಿಂದ ಕೆರೆಯಲ್ಲಿರುವ ನೀರನ್ನು ಖಾಲಿ ಮಾಡಲಾಗಿದ್ದು, ಇದರಿಂದ ಸಾರ್ವಜನಿಕರಿಗೆ ನೀರಿನ ಸಮಸ್ಯೆಯಾಗಿದೆ. ಆದ್ದರಿಂದ ಶೀಘ್ರವೇ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ನೀರನ್ನು ಒದಗಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಹುಲ್ಮನೆ ಗಣೇಶ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ರಂಜಾನ್ ರೋಜಾ ಸಮಯ**

ದಿನಾಂಕ 11.05.2021
ಇಫ್ತೇಯಾರಿ ಸಮಯ : 6-51
ದಿನಾಂಕ 12.05.2021
ಸಹೇರಿ ಸಮಯ : 4-42

## ಜಿಲ್ಲೆಯಲ್ಲಿ 197 ಸೋಂಕಿತರು ಪತ್ತೆ

ದಾವಣಗೆರೆ, ಮೇ 10 – ಜಿಲ್ಲೆಯಲ್ಲಿ ಸೋಮವಾರ 197 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ ಮೂವರು ಮೃತಪಟ್ಟಿದ್ದು, 301 ಜನ ಗುಣ ಮುಖರಾಗಿ ಬಿಡುಗಡೆಯಾಗಿದ್ದಾರೆ.

ಸೋಮವಾರ ಸೋಂಕಿತರಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 3,106ಕ್ಕೆ ಇಳಿಕೆಯಾಗಿದೆ. ದಾವಣಗೆರೆ ತಾಲ್ಲೂಕಿನ ಇಬ್ಬರು ಹಾಗೂ ಹರಿಹರದ ಒಬ್ಬರು ಸೋಂಕಿನಿಂದ ಸಾವನ್ನಪ್ಪಿದ್ದಾರೆ.

**ದಿ ದಾವಣಗೆರೆ–ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,**
ಆಡಳಿತ ಕಚೇರಿ : 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ-2. ಫೋ : 272570

**ಬ್ಯಾಂಕಿನ ಸದಸ್ಯರು ಮತ್ತು ಗ್ರಾಹಕರ ಗಮನಕ್ಕೆ**

ರಾಜ್ಯದಲ್ಲಿ/ನಗರದಲ್ಲಿ ಕೊರೊನಾ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಲಾಕ್‌ಡೌನ್ ಜಾರಿ ಮಾಡಿರುವುದರಿಂದ ನಮ್ಮ ಸದಸ್ಯರ ಮತ್ತು ಗ್ರಾಹಕರ ಆರೋಗ್ಯ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಬ್ಯಾಂಕಿನ ವ್ಯವಹಾರದ ವೇಳೆಯನ್ನು ದಿನಾಂಕ 11.05.2021ರಿಂದ ದಿನಾಂಕ 24.05.2021ರವರೆಗೆ ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಬದಲಾವಣೆ ಮಾಡಲಾಗಿದೆ. ಮಾನ್ಯ ಸದಸ್ಯರು ಮತ್ತು ಗ್ರಾಹಕರು ನಿಗದಿಪಡಿಸಿದ ವೇಳೆಯಲ್ಲಿ ತಮ್ಮ ವ್ಯವಹಾರವನ್ನು ನಡೆಸಲು ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಎಂ. ಶಿವಲಿಂಗಸ್ವಾಮಿ
ಪ್ರಧಾನ ವ್ಯವಸ್ಥಾಪಕರು

**ಹಾಲವರ್ತಿ ಶಂಕರಮ್ಮ ನಿಧನ**



ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಹಾಲವರ್ತಿ ಗ್ರಾಮದ ವಾಸಿ ದಿ. ರೇವಣಸಿದ್ದಪ್ಪನವರ ಧರ್ಮಪತ್ನಿ

**ಶ್ರೀಮತಿ ಶಂಕರಮ್ಮ**

ಅವರು ದಿನಾಂಕ 10.05.2021ರಂದು ಸೋಮವಾರ ಸಂಜೆ 5.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.05.2021ರ ಸೋಮವಾರ ರಾತ್ರಿ ಹಾಲವರ್ತಿ ಗ್ರಾಮದಲ್ಲಿ ನೆರವೇರಿತು.

ಇಂತಿ ದುಃಖತಪ್ತ ಕುಟುಂಬ ವರ್ಗ
**ಶಿವಪೂಜೆ ಕರಿಯಪ್ಪರ ವಂಶಸ್ಥರು, ಹಾಲವರ್ತಿ.**

**ಹಳೇಕುಂದುವಾಡದ ಕೆ.ಪಿ. ವೀರನಗೌಡ್ರು ನಿಧನ**



ದಾವಣಗೆರೆ ಸಿಟಿ ಹಳೇಕುಂದುವಾಡ ವಾಸಿ
ಶ್ರೀ ಪಟೇಲ್ ಸಿದ್ದನಗೌಡ್ರು ಅವರ ಹಿರಿಯ ಪುತ್ರ
**ಕೆ.ಪಿ. ವೀರನಗೌಡ್ರು** (51)
ಅವರು ದಿನಾಂಕ 10.5.2021ರ ಸೋಮವಾರ ಬೆಳಿಗ್ಗೆ 6.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ತಮ್ಮ, ಅಕ್ಕ-ತಂಗಿಯರು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.5.2021ರ ಸೋಮವಾರ ಬೆಳಿಗ್ಗೆ 11.50ಕ್ಕೆ ಹಳೇಕುಂದುವಾಡದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

**-ದುಃಖತಪ್ತ ಕುಟುಂಬ ವರ್ಗ**
**ಮೊ. 96115-80395, 99866-47024**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte